ಪರಮಪೂಜ್ಯ ಶ್ರೀಮಜ್ಜಗದ್ಗುರು ಶಂಕರಾಚಾರ್ಯ
ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳವರ
ಆಶೀರ್ಮಂಗಲದೊಂದಿಗೆ



ಸಂಕ್ಷೇಪರಾಮಾಯಣ

ವಾಲ್ಮೀಕಿ ರಾಮಾಯಣದ ಪ್ರಥಮ ಸರ್ಗ
ಭಜನ ರಾಮಾಯಣ ಸಹಿತ

ಅನುವಾದ

ವಿದ್ವಾನ್ ಎನ್. ರಂಗನಾಥ ಶರ್ಮಾ

ಪರಮಪೂಜ್ಯ ಶ್ರೀಮಜ್ಜಗದ್ಗುರುಶಂಕರಾಚಾರ್ಯ
ಶ್ರೀಶ್ರೀರಾಘವೇಶ್ವರಭಾರತೀಮಹಾಸ್ವಾಮಿಗಳವರ
ಆಶೀರ್ಮಂಗಲದೊಂದಿಗೆ

ಸಂಕ್ಷೇಪರಾಮಾಯಣ

ಶ್ರೀಮದ್ವಾಲ್ಮೀಕಿರಾಮಾಯಣದ ಪ್ರಥಮ ಸರ್ಗ
ಭಜನ ರಾಮಾಯಣ ಸಹಿತ

ಅನುವಾದಕರು
ವಿದ್ವಾನ್ ಎನ್.ರಂಗನಾಥಶರ್ಮಾ

ಪ್ರಕಾಶನ
ಶ್ರೀಭಾರತೀ ಪ್ರಕಾಶನ
ಶ್ರೀರಾಮಚಂದ್ರಾಪುರಮಠ
ಅಂಚೆ: ಹನಿಯ, ತಾಲ್ಲೂಕು : ಹೊಸನಗರ, ಜಿಲ್ಲೆ : ಶಿವಮೊಗ್ಗ.
ದೂರವಾಣಿ : 08185-265050

''ಸಂಕ್ಷೇಪ ರಾಮಾಯಣ''
ಅನುವಾದ: ವಿದ್ವಾನ್ ಎನ್. ರಂಗನಾಥ ಶರ್ಮಾ
ಪ್ರಕಾಶಕರು : ಶ್ರೀಭಾರತೀಪ್ರಕಾಶನ
ಶ್ರೀರಾಮಚಂದ್ರಾಪುರಮಠ
ಅಂಚೆ : ಹನಿಯ, ಹೊಸನಗರ ತಾ. ಶಿವಮೊಗ್ಗ ಜಿಲ್ಲೆ - 577418

ಪ್ರಥಮ ಮುದ್ರಣ : 2005

© ಶ್ರೀಭಾರತೀ ಪ್ರಕಾಶನ

ಪ್ರತಿಗಳು : 1000

ಪುಟಗಳು :VII+ 52

ಬೆಲೆ: ರೂ. 20

ಮುಖಪುಟ ವಿನ್ಯಾಸ : ಶ್ರೀ ಯು.ಟಿ. ಸುರೇಶ್, ಬೆಂಗಳೂರು

ಅಕ್ಷರ ಜೋಡಣೆ : ಶ್ರೀಮತಿ ಶಾರದಾಬಾಪಟ್, ಸಾಗರ

ಮುದ್ರಣ : ದಿಗಂತ ಮುದ್ರಣ ಲಿಮಿಟೆಡ್, ಮಂಗಳೂರು

ಸಮರ್ಪಣೆ

ಮನುಕುಲದ ಮಂಗಲಕ್ಕಾಗಿ
ಮಹಿಮಾನ್ವಿತ ಶ್ರೀರಾಮನ
ಜೀವನ ಚರಿತ್ರೆಯನ್ನು ಚಿತ್ರಿಸಿದ
ಮಹರ್ಷಿ ವಾಲ್ಮೀಕಿಯ
ಪಾವನ ಪದತಲಗಳಿಗೆ

॥ ಪ್ರಸೀದತು ಶ್ರೀರಾಮಚಂದ್ರಃ ॥

श्रीराम

ಗ.ಸಂ. 228

ಶ್ರೀಮತ್ಪರಮಹಂಸಪರಿವ್ರಾಜಕಾಚಾರ್ಯವರ್ಯ ಪದವಾಕ್ಯಪ್ರಮಾಣಪಾರಾವಾರಪಾರೀಣ
ಯಮನಿಯಮಾಸನಪ್ರಾಣಾಯಾಮಪ್ರತ್ಯಾಹಾರಧ್ಯಾನಧಾರಣಸಮಾಧ್ಯಷ್ಟಾಂಗಯೋಗಾನುಷ್ಠಾನನಿಷ್ಠ
ಷಡ್ದರ್ಶನಸ್ಥಾಪನಾಚಾರ್ಯ ತಪಶ್ಚಕ್ರವರ್ತ್ಯಾದ್ಯನೇಕವಿಶೇಷಣವಿಶಿಷ್ಟ
ಶ್ರೀಮಜ್ಜಗದ್ಗುರುಶಂಕರಾಚಾರ್ಯಶಿಷ್ಯ
ಶ್ರೀಸುರೇಶ್ವರಾಚಾರ್ಯಜ್ಯೇಷ್ಠಶಿಷ್ಯ ವಿದ್ಯಾನಂದಾಚಾರ್ಯಾವಿಚ್ಛಿನ್ನಗುರುಪರಂಪರಾಪ್ರಾಪ್ತ
ಸಕಲನಿಗಮಾಗಮಸಾರಹೃದಯ ಸಾಂಖ್ಯತ್ರಯಪ್ರತಿಪಾದಕ ವೈದಿಕಮಾರ್ಗಪ್ರವರ್ತಕ
ಸರ್ವತಂತ್ರಸ್ವತಂತ್ರಾದಿಬಿರುದಾಂಕಿತ ವಿದ್ಯಾನಗರಮಹಾರಾಜಧಾನೀವೈಭವಸಿಂಹಾಸನಾಧೀಶ್ವರ
ವಿಖ್ಯಾತವ್ಯಾಖ್ಯಾನಸಿಂಹಾಸನಾರೂಢ ಶ್ರೀಮದ್ರಾಜಾಧಿರಾಜಗುರು
ಶ್ರೀಗೋಕರ್ಣಮಂಡಲಾಚಾರ್ಯ
ಶ್ರೀಮಚ್ಛತಶೃಂಗಪುರವರಾಧೀಶ್ವರ ಶ್ರೀಮಚ್ಛರಾವತೀತೀರವಾಸ ಶ್ರೀಮದ್ರಾಮಚಂದ್ರಾಪುರಮಠಸ್ಥ
ಶ್ರೀಮದ್ರಾಮಚಂದ್ರಚಂದ್ರಮೌಳೀಶ್ವರಪಾದಪದ್ಮಾರಾಧಕ
ಶ್ರೀಮದ್ರಾಘವೇಂದ್ರಭಾರತೀ ಶ್ರೀಗುರುಕರಕಮಲಸಂಜಾತ

ಶ್ರೀಮದ್ರಾಘವೇಶ್ವರಭಾರತೀ ಶ್ರೀಸ್ವಾಮಿಭಿಃ

ಅಸ್ಮದತ್ಯಂತ ಪ್ರಿಯ ಪ್ರಕಾಶಕರು, ಶ್ರೀಭಾರತೀ ಪ್ರಕಾಶನ ಇವರಿಗೆ,

॥ ಶ್ರೀಮನ್ನಾರಾಯಣಸ್ಮರಣಪುರಸ್ಸರಂ ವಿರಚಿತಾಶಿಷಃ-ಸಮುಲ್ಲಸಂತು ॥

॥ ಸಂಪ್ರತಿ ॥

ಶ್ರೀಸವಾರಿಯು ಆರಾಧ್ಯ ಶ್ರೀಸೀತಾರಾಮಚಂದ್ರ, ಚಂದ್ರಮೌಳೀಶ್ವರ ರಾಜರಾಜೇಶ್ವರೀ ದೇವತಾ ದಿವ್ಯಸನ್ನಿಧಿಯಲ್ಲಿ ಅನುದಿನವೂ ಸಮಸ್ತ ಜನತೆಯ ಯೋಗಕ್ಷೇಮಗಳನ್ನು ಸಂಪ್ರಾರ್ಥಿಸುತ್ತಾ ಸದ್ಯ ಈ ಮೊಕ್ಕಾಮಿನಲ್ಲಿ ಕ್ಷೇಮದಿಂದ ವಸತಿ ಮಾಡಿದೆ.

''ರಾಮೋ ವಿಗ್ರವಾನ್ ಧರ್ಮಃ' ಧರ್ಮಮೂರ್ತಿಯಾದ ಶ್ರೀರಾಮನ ಪಾವನ ಚರಿತೆ ಮನುಕುಲಕ್ಕೆ ಆದರ್ಶ ಮತ್ತು ಅನುಸರಣೀಯ. ದಿವಿಯಿಂದ ಭುವಿಗವತರಿಸಿ, ದುಷ್ಟಶಕ್ತಿ ನಿವಾರಿಸಿ, ಭುವಿಗೆ ಧರ್ಮದ ನೆಲೆ ಕರುಣಿಸಿದ, ಪುರುಷಾರ್ಥಮಯ ಬಾಳಾಟಕ್ಕೆ ನಿರ್ದೇಶನ ನೀಡಿದ ಶ್ರೀರಾಮನ ಮಾರ್ಗ ಅದು ಧರ್ಮ ಮಾರ್ಗ; ಅದು ಆನಂದದ ದಿವ್ಯನೆಲೆಗೆ ನಮ್ಮನ್ನು ತಲುಪಿಸುವ ಸೇತುವೆ. ಎಲ್ಲ ರೀತಿಯ ಆದರ್ಶಗಳ ಸಂಗಮವನ್ನು ಮಹರ್ಷಿ ವಾಲ್ಮೀಕಿಗಳು ರಾಮಾಯಣದಲ್ಲಿ ಹಿಡಿದಿಟ್ಟಿದ್ದಾರೆ. ಈ ಎಲ್ಲ ಸಂಗತಿಯನ್ನು ಸಂಕ್ಷೇಪ ರಾಮಾಯಣದಲ್ಲಿ ಸಂಗ್ರಹಿಸಿದ್ದಾರೆ. ಇದು ರಾಮಾಯಣದ ಸಂಕ್ಷೇಪ. ಈ ಸಂಕ್ಷೇಪ ರಾಮಾಯಣ ಮನ ಮತ್ತು ಮನೆಯಲ್ಲಿ ಮೊಳಗಬೇಕು, ಬೆಳಗಬೇಕು ಮತ್ತು ಅನುಷ್ಠಾನಗೊಳ್ಳಬೇಕು ಎಂಬುದು ನಮ್ಮ ಹಂಬಲ. ಪ್ರತಿಯೊಬ್ಬನೂ ಶ್ರೀರಾಮನ ಆದರ್ಶ ಪಾಲಿಸುವಂತಾಗಬೇಕು. ಆಗಲೇ ಕನಸಿನ ರಾಮರಾಜ್ಯ ಸಾಕಾರವಾಗಬಲ್ಲದು. ಈ ಸಂಕ್ಷೇಪ ರಾಮಾಯಣದ ಪಾರಾಯಣ-ಅನುಸಂಧಾನಕ್ಕೆ ಈ ಕಿರುಹೊತ್ತಗೆ ಶ್ರೀಭಾರತೀ ಪ್ರಕಾಶನದಿಂದ ಲೋಕಾರ್ಪಣವಾಗುತ್ತಿರುವುದು ಸಂತಸದ ಸಂಗತಿ. ನಾಡಿನ ಹಿರಿಯ ವಿದ್ವಾಂಸ ಎನ್. ರಂಗನಾಥಶರ್ಮಾರವರ ಅನುವಾದ ಪಾರಾಯಣ ಮಾಡುವವರಿಗೆ ಅರ್ಥವನ್ನರಿಯಲು ಸಹಕಾರಿಯಾಗಿದೆ. ಗಾತ್ರದಲ್ಲಿ ಕಿರಿದಾದರೂ ಹಿರಿದಾದ ವಿಷಯಗಳನ್ನು ಹೊಂದಿರುವ ಈ ಹೊತ್ತಗೆಯು ಸರ್ವಜನೋಪಯೋಗಿಯಾಗಲೆಂದು ಹಾರೈಸುತ್ತೇವೆ.

ಇತಿ ಶ್ರೀಮನ್ನಾರಾಯಣ ಸ್ಮೃತಯಃ

ಮಿತಿ - ಶ್ರೀ ಪಾರ್ಥಿವ ಸಂ॥ ಪುಷ್ಯ ಶುಕ್ಲ ಚತುರ್ಥಿ
ವಸತಿ - ಶ್ರೀತ್ರಿವಿಕ್ರಮಾನಂದ ಮಠ, ಗಂಪ್ವಾರ

ಪ್ರಕಾಶಕರ ನುಡಿ

ಶ್ರೀಭಾರತೀ ಪ್ರಕಾಶನದ ಹದಿಮೂರನೆಯ ಗ್ರಂಥಪುಷ್ಪಕ್ಕೆ ಆದಿಕಾವ್ಯದ ಆದಿಸರ್ಗ ಮಕರಂದವಾಗಿದೆ. ದೇವಲೋಕದಿಂದ ಇಳಿದು ಬಂದ ದೇವರ್ಷಿ ನಾರದರು ಭೂಲೋಕದಲ್ಲಿ ಮಹರ್ಷಿ ವಾಲ್ಮೀಕಿಗಳಿಗೆ ಹೇಳಿದ ಶ್ರೀರಾಮನ ಚರಿತೆ ಇದರ ವಸ್ತು.

ವಾಲ್ಮೀಕಿಗಳು 24 ಸಾವಿರ ಶ್ಲೋಕಗಳಲ್ಲಿ ವಿಸ್ತಾರವಾಗಿ ಹೇಳುವ ಕಥೆಯನ್ನು ನಾರದರು ನೂರು ಶ್ಲೋಕಗಳಲ್ಲಿ ಸಂಕ್ಷೇಪವಾಗಿ ನುಡಿಯುತ್ತಾರೆ. ಆದ್ದರಿಂದ ಇದು ರಾಮಾಯಣದ ಸಂಕ್ಷೇಪ - ಸಂಕ್ಷೇಪ ರಾಮಾಯಣ.

ಸಂಕ್ಷೇಪ ರಾಮಾಯಣ ನಾಡಿನ ಎಲ್ಲರ ನಿತ್ಯಪಾರಾಯಣವಾಗಬೇಕೆನ್ನುವುದು ಶ್ರೀಮಜ್ಜಗದ್ಗುರುಶಂಕರಾಚಾರ್ಯ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳವರ ಆಶಯ. ಅದಕ್ಕೆ ಅನುಕೂಲವಾಗಲು ಈ ಪುಸ್ತಕ ಪ್ರಕಾಶನ.

ಮಹಾಮಹೋಪಾಧ್ಯಾಯ ವಿದ್ವಾನ್ ಎನ್. ರಂಗನಾಥಶರ್ಮರು ಇದನ್ನು ಸರಳ ಕನ್ನಡದಲ್ಲಿ ಅನುವಾದಿಸಿಕೊಟ್ಟಿದ್ದಾರೆ. ಅವರಿಗೆ ಕೃತಜ್ಞತೆಗಳು ಸಲ್ಲುತ್ತವೆ. ಆದ್ಯಂತ ಮಂಗಲ ಶ್ಲೋಕಗಳನ್ನು ಶ್ರೀ ಹೆಚ್.ಎಸ್. ನಾಗೇಂದ್ರ ಭಟ್ಟರು ಅನುವಾದಿಸಿದ್ದಾರೆ. ಅವರಿಗೂ ವಂದನೆಗಳು.

ಮುದ್ರಣದ ಸಿದ್ಧತೆ, ಕರಡು ತಿದ್ದುಪಡಿ ಮುಂತಾದ ಕಾರ್ಯಗಳಲ್ಲಿ ವಿದ್ವಾನ್ ಗಜಾನನ ಭಟ್ ರೇವಣಕಟ್ಟಾ ಭಾಗಿಗಳಾಗಿದ್ದಾರೆ. ಅವರಿಗೆ ಧನ್ಯವಾದಗಳು. ಅಕ್ಷರಜೋಡಣೆ ಮಾಡಿಕೊಟ್ಟ ಶ್ರೀಮತಿ ಶಾರದಾಬಾಪಟ್‌ರಿಗೆ ಕೃತಜ್ಞತೆಗಳು. ಸುಂದರವಾಗಿ ಮುಖಪುಟ ವಿನ್ಯಾಸಮಾಡಿದ ಶ್ರೀ ಯು.ಟಿ. ಸುರೇಶ್‌ರಿಗೆ ವಂದನೆಗಳು. ಮುದ್ರಣ ಮಾಡಿದ ದಿಗಂತ ಮುದ್ರಣದ ಸಹಕಾರಿಗಳಿಗೆ ನಾವು ಆಭಾರಿಗಳು.

ಎಂದಿನಂತೆ ಗ್ರಂಥಪ್ರಕಾಶನದ ಸಂಪೂರ್ಣ ಹೊಣೆ ಹೊತ್ತು ನಿರ್ವಹಿಸಿದ ವಿದ್ವಾನ್ ಜಗದೀಶ ಶರ್ಮರ ಸೇವಾಸ್ಮರಣೆ ಸದಾ ಹಸಿರು.

ಮಾರ್ಗದರ್ಶನವಿತ್ತು ಆಶೀರ್ವದಿಸಿದ ಪರಮಪೂಜ್ಯ ಶ್ರೀಗಳವರಿಗೆ ಸಹಸ್ರ ಸಹಸ್ರ ಪ್ರಣಾಮಗಳು.

- ಪ್ರಕಾಶಕ

ಅನುವಾದಕರ ನುಡಿ

ನಾರದಮಹರ್ಷಿಗಳು ವಾಲ್ಮೀಕಿ ಮುನಿಗಳಿಗೆ ಹೇಳಿದ ಶ್ರೀರಾಮಚರಿತೆ ಇದು. ''ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್'' ಎಂದು ಆರಂಭಿಸಿ, ಹದಿನಾರುಗುಣಗಳನ್ನು ಎತ್ತಿಹೇಳಿ , ಇಷ್ಟು ಗುಣವುಳ್ಳ ಪುರುಷನು ಈಗ ಲೋಕದಲ್ಲಿದ್ದಾನೆಯೇ? ಎಂಬುದು ಅವರ ಪ್ರಶ್ನೆಯಾಗಿತ್ತು. ಈ ರೀತಿಯಲ್ಲಿ ಕೇಳಲು ವಾಲ್ಮೀಕಿ ಮುನಿಗಳಿಗೆ ಬಂದಿದ್ದ ಸಂದೇಹವನ್ನು ನಾವು ಹೀಗೆ ಊಹಿಸಬಹುದು-ಧರ್ಮಶಾಸ್ತ್ರದಲ್ಲಿ ಹಲವಾರು ವಿಧಿನಿಷೇಧಗಳಿರುತ್ತವೆ. ನೀತಿಶಾಸ್ತ್ರದಲ್ಲಿ ಸಜ್ಜನ ಪ್ರಶಂಸೆ, ದುರ್ಜನ ನಿಂದೆಗಳಿರುತ್ತವೆ. ನೀತಿಶಾಸ್ತ್ರಕಾರರು ಮನುಷ್ಯನಲ್ಲಿರಬೇಕಾದ ಗುಣಗಳನ್ನೂ, ಇರಬಾರದ ದೋಷಗಳನ್ನೂ ಹೇಳಿರುತ್ತಾರೆ. ಹೀಗೆ ಧರ್ಮಶಾಸ್ತ್ರ ನೀತಿಶಾಸ್ತ್ರಗಳಲ್ಲಿ ಹೇಳಿರುವ ಸದಾಚಾರ ಸದ್ಗುಣಗಳೆಲ್ಲವನ್ನೂ ಚಾಚೂತಪ್ಪದೆ ಪಾಲಿಸಲು ಮನುಷ್ಯಮಾತ್ರನಿಗೆ ಸಾಧ್ಯವೇ? ಇತಿಹಾಸಪುರಾಣಗಳಲ್ಲಿ ಎಲ್ಲಿ ಹುಡುಕಿದರೂ ಎಂತಹ ಗುಣವಂತನಲ್ಲಿಯೂ ಒಂದೆರಡು ದೋಷಗಳಿದ್ದೇ ಇರುವುದು ಕಂಡು ಬರುತ್ತದೆ. ಆದ್ದರಿಂದ ಸಮಸ್ತ ಸದ್ಗುಣಗಳಿಂದ ಕೂಡಿದ ಒಬ್ಬ ವ್ಯಕ್ತಿಯಿದ್ದರೆ ಅವನು ಯಾರು? ಎಂದು ತಿಳಿಯುವ ಕುತೂಹಲ ವಾಲ್ಮೀಕಿ ಮುನಿಗಳಿಗೆ ಉಂಟಾಗಿರಬೇಕು. ಆದ್ದರಿಂದ ಅವರು ಈ ಪ್ರಶ್ನೆಯನ್ನು ನಾರದರ ಮುಂದೆ ಇಟ್ಟಿದ್ದಾರೆ.

ಇನ್ನೊಂದು ಕಾರಣವೂ ಇರಬಹುದು. ಈ ಪ್ರಶ್ನೆಗಳನ್ನು ಕೇಳುವಾಗ 'ಸಾಂಪ್ರತಂ' ಈಗ ಎಂಬುದನ್ನು ಅವರು ಸೇರಿಸಿದ್ದಾರೆ. ಆಗ ಶ್ರೀರಾಮನ ಪಟ್ಟಾಭಿಷೇಕವಾಗಿ ಅವನು ಅಯೋಧ್ಯೆಯಲ್ಲಿ ರಾಜ್ಯಭಾರವನ್ನು ನಡೆಸುತ್ತಿದ್ದಾನೆ. ಸೀತಾಪರಿತ್ಯಾಗವೂ ಆಗಿದೆ. ಸೀತಾದೇವಿಯು ವಾಲ್ಮೀಕಿ ಮುನಿಗಳ ಆಶ್ರಮದಲ್ಲಿಯೇ ಇದ್ದಾಳೆ. ವಾಲ್ಮೀಕಿ ಮುನಿಗಳಿಗೆ ಶ್ರೀರಾಮನ ಸದ್ಗುಣಗಳೆಲ್ಲವೂ ತಿಳಿದಿದೆ. ಆದರೂ ಒಂದು ಶಂಕೆ ಅವರಿಗೆ ಹುಟ್ಟಿದೆ. ಸೀತಾದೇವಿಯ ಪಾತಿವ್ರತ್ಯದ ಪರೀಕ್ಷೆ ಲಂಕೆಯ ಸಮೀಪದಲ್ಲಿ ಅಗ್ನಿಸಾಕ್ಷಿಕವಾಗಿ ನಡೆದು ಹೋಗಿದೆ. ಆದರೂ ಶ್ರೀರಾಮನು ಪ್ರಜೆಗಳ ಗುಸುಗುಸುವನ್ನು ಕೇಳಿ ದೇವಿಯನ್ನು ಪರಿತ್ಯಜಿಸಿದ್ದಾನೆ. ಇದು ನೀತಿಯೇ? ಧರ್ಮವೇ? ಎಂಬ ಸಂದೇಹ ವಾಲ್ಮೀಕಿ ಮುನಿಗಳ ಮನಸ್ಸಿನಲ್ಲಿ ಉದಿಸಿದೆ. ಸೀತಾಪರಿತ್ಯಾಗವು ನಡೆದ ಮೇಲೆ ಶ್ರೀರಾಮನ ಈ ವರ್ತನೆಯ ವಿಷಯವಾಗಿ ನಾರದರ ಅಭಿಪ್ರಾಯ ಏನಿದ್ದೀತು? ಎಂಬ ಕುತೂಹಲದಿಂದ 'ಸಾಂಪ್ರತಂ' ಎಂದು ಹೇಳಿ, ಈಗ ಪೂರ್ಣಪ್ರಮಾಣದ ಧರ್ಮಾತ್ಮನು ಯಾರು? ಎಂದರಿಯುವುದಕ್ಕಾಗಿ ಈ ಪ್ರಶ್ನೆಯನ್ನು ಕೇಳಿರಬಹುದು.

ನಾರದರು ಅದಕ್ಕೆ ಉತ್ತರವಾಗಿ ಶ್ರೀರಾಮನ ಸದ್ಗುಣಗಳನ್ನು ಇನ್ನೂ ವಿಸ್ತಾರವಾಗಿ ವರ್ಣಿಸಿ, ಆತನ ಸೌಂದರ್ಯವನ್ನೂ, ಅವಯವದ ಸೌಷ್ಠವವನ್ನೂ ಕಣ್ಣಿಗೆ ಕಟ್ಟುವಂತೆ ವರ್ಣಿಸಿದ್ದಾರೆ. ''ಕಶ್ಚೈಕಪ್ರಿಯದರ್ಶನಃ'' ಎಂಬ ವಾಲ್ಮೀಕಿ ಮುನಿಗಳ ಪ್ರಶ್ನೆಗೆ ಇದು ಉತ್ತರವಾಗಿದೆ. ಶ್ರೀರಾಮಚರಿತೆಯನ್ನು ಸಂಕ್ಷೇಪವಾಗಿ ಹೇಳಿ ಪಟ್ಟಾಭಿಷೇಕವನ್ನು ವರ್ಣಿಸಿ ಕೈಬಿಟ್ಟಿದ್ದಾರೆ. ಸೀತಾಪರಿತ್ಯಾಗದ ವಿಚಾರವನ್ನು ಬುದ್ಧಿಪೂರ್ವಕವಾಗಿಯೇ ಕೈಬಿಟ್ಟಿದ್ದಾರೆ. ಅದೆಲ್ಲವೂ ವಾಲ್ಮೀಕಿಮುನಿಗಳಿಗೆ ತಿಳಿದೇ ಇದೆ. ನಾರದರು ''ವಾಗ್ವಿದಾಂ ವರ''ರಲ್ಲವೇ?

ದೂರದ ಲಂಕೆಯಲ್ಲಿ ಸೀತಾದೇವಿಯ ಅಗ್ನಿಪರೀಕ್ಷೆಯಾಗಿದ್ದನ್ನು ಅಯೋಧ್ಯೆಯ ಜನರು ಕೇಳಿದ್ದಾರೆಯೇ ಹೊರತು ನೋಡಿಲ್ಲ. ಆದ್ದರಿಂದ ಮಹಾರಾಣಿಯಾದವಳ ವಿಷಯದಲ್ಲಿ ಗುಸುಗುಸು ಮಾತು ಆರಂಭವಾಯಿತು. ಅದನ್ನು ಶ್ರೀರಾಮನು ಸಹಿಸಲಾರ. ರಾಜ್ಯವನ್ನಾಳತಕ್ಕವನಂತೆಯೇ ಮಹಾರಾಣಿಯೂ ನಿಷ್ಕಳಂಕಳಾಗಿರಬೇಕೆಂಬುದು ರಾಜಧರ್ಮ. ಈಗಿನ ರಾಜ್ಯವಾಳತಕ್ಕವರು ಹೇಳಿಕೊಳ್ಳುವಂತೆ ಖಾಸಗಿಯೆಂಬುದು ಆಗ ಇರಲಿಲ್ಲ. ಶ್ರೀರಾಮನಿಗೆ ಎದುರಾದದ್ದು ಎರಡು ಮಾರ್ಗಗಳು. ಒಂದು ಸೀತಾಪರಿತ್ಯಾಗ ಅಥವಾ ಸ್ವತಃ ರಾಜ್ಯಪರಿತ್ಯಾಗ ಮಾಡಿ ಪತ್ನಿಯೊಡನೆ ಕಾಡಿಗೆ ಹೋಗುವುದು. ಆಗ ಅಯೋಧ್ಯೆಯನ್ನಾಳತಕ್ಕವರು ಯಾರು? ಭರತಾದಿ ಸೋದರರು ಎಂದಿಗೂ ಅಯೋಧ್ಯಾ ಸಿಂಹಾಸನವನ್ನೇರತಕ್ಕವರಲ್ಲ. ರಾಜ್ಯವು ಅನಾಯಕವಾಗುತ್ತದೆ. 'ಒಬ್ಬ ಹೆಂಗಸಿನ ವ್ಯಾಮೋಹದಿಂದ ರಾಮನು ರಾಜ್ಯವನ್ನು ಅನರ್ಥಕ್ಕೆ ಸಿಕ್ಕಿಸಿದ' ಎಂಬ ಕೆಟ್ಟ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಇತ್ಯಾದಿ ಕಾರಣಗಳಿಂದ ಸೀತೆಯನ್ನು ಶ್ರೀರಾಮನು ಪರಿತ್ಯಜಿಸಬೇಕಾಯಿತು. ರಾಮನೇನೂ ಇನ್ನೊಬ್ಬಳನ್ನು ಮದುವೆಯಾಗಲಿಲ್ಲ. ಕಷ್ಟಕ್ಕೆ ಗುರಿಯಾದವರು ಸೀತಾದೇವಿ ಮಾತ್ರವಲ್ಲ, ಶ್ರೀರಾಮನೂ ಮನೋವ್ಯಥೆಗಳಿಂದ ನೊಂದುನೊಂದು ಬೆಂಡಾಗಿ ಹೋಗುತ್ತಾನೆ.

''ದುಃಖಸಂವೇದನಾಯೈವ ರಾಮೇ ಚೈತನ್ಯಮಾಗತಂ'' ಎಂದು ಮಹಾಕವಿ ಭವಭೂತಿ ಹೇಳಿದುದರಲ್ಲಿ ಆಚ್ಚರಿಯೇನೂ ಇಲ್ಲ. ಆದರೂ ಏಕಪತ್ನೀವ್ರತಸ್ಥನಾಗಿ ಸಕಲರಾಜರಿಗೂ ಆದರ್ಶಪುರುಷನೆಂದು ಕೀರ್ತಿಶಾಲಿಯಾದವನು ಶ್ರೀರಾಮ. ಧರ್ಮರಕ್ಷಣೆಗಾಗಿ ಅವತರಿಸಿದ ಶ್ರೀಮನ್ನಾರಾಯಣನೇ ಶ್ರೀರಾಮ. 'ನಾರೀಣಾಮುತ್ತಮಾ ವಧೂಃ' ಎಂದು ವಾಲ್ಮೀಕಿಮುನಿಗಳಿಂದ ಪ್ರಶಂಸೆಗೆ ಒಳಗಾದವಳು ಸೀತಾದೇವಿ. ಸೌಭ್ರಾತ್ರಕ್ಕೆ ನಿದರ್ಶನವಾಗಿ ಬಾಳಿದವರು ಶ್ರೀರಾಮಲಕ್ಷ್ಮಣಭರತಶತ್ರುಘ್ನರು. ಭಕ್ತಿಯೋಗ-ಕರ್ಮಯೋಗಗಳ ಮೂರ್ತಿಯೋ ಎಂಬಂತೆ ವರ್ತಿಸಿ ಧನ್ಯನಾದವನು ಮಹಾವೀರನಾದ ಹನುಮಂತ.

ನಾರದಮಹರ್ಷಿಗಳ ಪವಿತ್ರಮುಖಾರವಿಂದದಿಂದ ಸುರಿದ ಮಧು ಶ್ರೀರಾಮಚರಿತೆ. ಸಂಕ್ಷಿಪ್ತವಾಗಿದ್ದರೂ ವಿಸ್ತೃತವಾದ ಪುಣ್ಯಫಲವನ್ನು ನೀಡುವ ಈ ಗ್ರಂಥವನ್ನು ಭಕ್ತರು ನಿತ್ಯಪಾರಾಯಣ ಮಾಡಬಹುದು. ಪಾರಾಯಣಕ್ಕೆ ಸ್ತ್ರೀಪುರುಷರೆಂಬ ಭೇದವೇನೂ ಇಲ್ಲದೆ ಸರ್ವರೂ ಪಾರಾಯಣ ಮಾಡಬಹುದು. ಸ್ನಾನ ಮಾಡಿ ಶುಚಿಯಾಗಿ ಶುಚಿಪ್ರದೇಶದಲ್ಲಿ ಕುಳಿತು ಭಕ್ತಿಯಿಂದ ಪಠಿಸಬೇಕು. ಮಧ್ಯದಲ್ಲಿ ನಿಲ್ಲಿಸದೇ ಪೂರ್ತಿಯಾಗಿ ಪಠಿಸಬೇಕು.

ಶ್ರೀರಾಮಚಂದ್ರಾಪುರ ಶ್ರೀಮಠಾಧೀಶರಾದ ಪರಮಪೂಜ್ಯ ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳ ಆದೇಶದಂತೆ ಇದನ್ನು ಕನ್ನಡಕ್ಕೆ ಅನುವಾದಿಸಿ ಭಕ್ತಿಪೂರ್ವಕವಾಗಿ ಅವರ ದಿವ್ಯಸನ್ನಿಧಿಯಲ್ಲಿ ಅರ್ಪಿಸಿದ್ದೇನೆ. ಶ್ರೀರಾಮನು ಸುಪ್ರಸನ್ನನಾಗಿ ಸರ್ವರಿಗೂ ಚಿತ್ತಶಾಂತಿಯನ್ನು ಅನುಗ್ರಹಿಸಲಿ.

ಬೆಂಗಳೂರು

- ವಿದ್ವಾನ್ ಎನ್. ರಂಗನಾಥಶರ್ಮಾ

ದಿನಾಂಕ : 20.12.2005

ಶ್ರೀಮಜ್ಜಗದ್ಗುರುಶಂಕರಾಚಾರ್ಯ
ಶ್ರೀಶ್ರೀರಾಘವೇಶ್ವರಭಾರತೀ ಮಹಾಸ್ವಾಮಿಗಳವರ

ಆಶೀರ್ಮಂಗಲ

॥ ಹರೇ ರಾಮ ॥

ವೇದವೇದ್ಯೇ ಪರೇ ಪುಂಸಿ ಜಾತೇ ದಶರಥಾತ್ಮಜೇ।
ವೇದಃ ಪ್ರಾಚೇತಸಾದಾಸೀತ್ ಸಾಕ್ಷಾದ್ರಾಮಾಯಣಾತ್ಮನಾ॥

ವೇದವೇದ್ಯನಾದ ಭಗವಂತ ದಶರಥನ ಮಗನಾಗಿ, ಶ್ರೀರಾಮಚಂದ್ರನಾಗಿ ಭುವಿಯಲ್ಲಿ ಆವಿರ್ಭವಿಸಿದಾಗ ವೇದಗಳೂ ಸಹ ಭುವಿಯಲ್ಲಿ ಅವತರಿಸಿದವು. ಬದುಕಿನ ಸಾರವೆಲ್ಲ ರಾಮಾಯಣವಾಗಿದೆ. ವೇದಗಳು ಅನಂತ; ಅಪಾರ; ಗಂಭೀರ, ಪಾಮರಗಮ್ಯವಲ್ಲ. ಹಾಗಾಗಿ ವಾಲ್ಮೀಕಿ ಮಹರ್ಷಿಗಳು ಆ ವೇದಗಳ ಸಾರವನ್ನೆಲ್ಲ ರಾಮಾಯಣದಲ್ಲಿ ಅಳವಡಿಸಿ ಲೋಕಕ್ಕೆ ಕೊಟ್ಟರು.

ರಾಮಾಯಣದಲ್ಲಿ ಏಳು ಕಾಂಡಗಳಿವೆ. ಐದುನೂರು ಸರ್ಗಗಳಿವೆ. ಇಪ್ಪತ್ತನಾಲ್ಕು ಸಹಸ್ರ ಶ್ಲೋಕಗಳಿವೆ. ಅದೂ ವಿಸ್ತಾರವೇ. ಕವಿ ವಾಲ್ಮೀಕಿಗಳಿಗೆ ಅನಿಸಿರಬಹುದು - ಮುಂದೆ ಬರುವ ಕಾಲವು ಧಾವಂತದ ಕಾಲ. ಬದುಕನ್ನು ಸಾವಧಾನವಾಗಿ ಆಸ್ವಾದಿಸುವ ಪೂರ್ವಜರಲ್ಲ. ಗಡಿಬಿಡಿಯ ಕಾಲ. ಅದಕ್ಕಾಗಿ ವಾಲ್ಮೀಕಿಗಳು ರಾಮಾಯಣವನ್ನು ಸಂಕ್ಷೇಪರಾಮಾಯಣದಲ್ಲಿ ಹಿಡಿದಿಟ್ಟರು. ಇದು ರಾಮಾಯಣದ ಮೊದಲನೇ ಸರ್ಗ. ಕೇವಲ ನೂರು ಶ್ಲೋಕಗಳು ಮಾತ್ರ. ಶ್ಲೋಕಗಳಲ್ಲಿ ಶ್ರೀರಾಮನು ಹೇಗೆ ದಿವಿಯಿಂದ ಭುವಿಗಿಳಿದು ಬಂದ? ಹೇಗೆ ನರರೊಡನೆ ಆಡಿದ? ಮತ್ತೆ ನಾರಾಯಣನಾಗಿ ವೈಕುಂಠಕ್ಕೇರಿದ? ಈ ಎಲ್ಲ ಸಂಗತಿಗಳುಂಟು. ಕೇವಲ ರಾಮ ಮಾತ್ರನಲ್ಲ; ಹೇಗೆ ರಾಮಾಯಣ ಧರೆಗಿಳಿದು ಬಂತು. ರಾಮಾಯಣದ ಆವಿರ್ಭಾವ ಹೇಗೆ? ಅದು ಕೂಡ ಇದೆ.

ವೇದಗಳ ಸಾರ ರಾಮಾಯಣದಲ್ಲಿದೆ. ರಾಮಾಯಣದ ಸಾರ ಸಂಕ್ಷೇಪ ರಾಮಾಯಣದಲ್ಲಿದೆ. ಮಹರ್ಷಿಗಳಿಗೆ ನಮ್ಮಲ್ಲಿ ಎಷ್ಟು ಕನಿಕರ ನೋಡಿ. ನಾವಿದರ ಸದುಪಯೋಗ ಮಾಡಿಕೊಳ್ಳಬೇಕು. ಇನ್ನೆಷ್ಟು ಕನಿಕರವನ್ನು ಯಾರೂ ನಮ್ಮ ಮೇಲೆ ತೋರಿಸಲು ಸಾಧ್ಯವಿಲ್ಲ. ಸುಲಭವಾದ ಸಾಧನವನ್ನು ನಾವು ಉಪಯೋಗಿಸಿಕೊಳ್ಳಬೇಕಾಗಿದೆ. ಹಾಗಾಗಿ ಸಂಕ್ಷೇಪ ರಾಮಾಯಣ. 'ರಾಮಸ್ಯ ಅಯನಂ ರಾಮಾಯಣಂ' ಎಂದರೆ, ರಾಮನ ಮಾರ್ಗ, ರಾಮನ ಹಾದಿ, ಅವನ ಮಾರ್ಗ ಧರ್ಮದ ಮಾರ್ಗ. ವೈಕುಂಠದಿಂದ ಭುವಿಗಿಳಿದ ಮಾರ್ಗ. ಭುವಿಯಲ್ಲಿ ಬಾಳಿ, ಬದುಕಿ, ದಿವಿಗೇರಿದ

ಮಾರ್ಗ. ಆ ಮಾರ್ಗದೊಟ್ಟಿಗೆ ನಮ್ಮ ಮನಸ್ಸು ಸಾಗಿ ಹೋಗಬೇಕು. ರಾಮಾಯಣವನ್ನು ಅಧ್ಯಯನ ಮಾಡುವಾಗ ಆಗುವ ಅನುಭೂತಿ ಅದು. ಎತ್ತ ಎತ್ತ ರಾಮ ಸಾಗಿದ, ಅತ್ತ ಅತ್ತ ನಮ್ಮ ಮನಸ್ಸು ಸಾಗಬೇಕು. ಅದು ಹೋಗಿ ನೆಲೆನಿಲ್ಲುವುದು ರಾಮ ನೆಲೆ ನಿಂತಲ್ಲಿ. ಅವನ ಆನಂದದ ನೆಲೆಯಲ್ಲಿ. ಪರಮಾನಂದದ ಕಡಲಲ್ಲಿ. ಹಾಗಾಗಿ ರಾಮಾಯಣ; ರಾಮನ ಅಯನ; ರಾಮನ ಮಾರ್ಗ. ಅಲ್ಲಿ ಸಾಗಬೇಕಿದೆ.

ಬದುಕಿಗೆ ಎರಡು ಕಣ್ಣುಗಳು. ಪರಮಾರ್ಥ ಮತ್ತು ವ್ಯವಹಾರ. ಪರವೆಷ್ಟು ಮುಖ್ಯವೋ ಇಹವೂ ಅಷ್ಟೇ ಮುಖ್ಯ. ಇಹವೆಷ್ಟು ಮುಖ್ಯವೋ ಪರವೂ ಅಷ್ಟೇ ಮುಖ್ಯ. ರಾಮಾಯಣದಲ್ಲಿ ಪರದ ಬದುಕಿಗೆ ಬೇಕಾದ ಮಾರ್ಗದರ್ಶನವಿದೆ. ರಾಮಾಯಣ ಆದರ್ಶಕಾವ್ಯ; ಆದರ್ಶಗಳ ಕಾವ್ಯ. ಅಲ್ಲಿ ರಾಜನ ಆದರ್ಶವಿದೆ, ತಂದೆಯ ಆದರ್ಶವಿದೆ, ಮಕ್ಕಳ ಆದರ್ಶವಿದೆ, ಪತ್ನಿಯ ಆದರ್ಶವಿದೆ, ಗುರುವಿನ ಆದರ್ಶವಿದೆ. ಹೀಗೆ ಆದರ್ಶಗಳ ಸಮಾಗಮ. 'ಆದರ್ಶ' ಎಂಬುದಕ್ಕೆ ಕನ್ನಡಿ ಎಂಬ ಅರ್ಥವಿದೆ. ಕನ್ನಡಿ ಏಕಿದೆ? ಮುಖವನ್ನು ನೋಡಿಕಂಡು ಓರೆಕೋರೆಗಳನ್ನು ತಿದ್ದಿಕೊಳ್ಳಲು ಇದೆ. ರಾಮಾಯಣದ ಕನ್ನಡಿಯಲ್ಲಿ ನಮ್ಮ ಬದುಕಿನ ಓರೆಕೋರೆಗಳು ಎಲ್ಲಿವೆ ಎಂಬುದು ತಿಳಿಯುವುದು. ರಾಮನ ಬದುಕಿನ ಸತ್ಯ ಎಲ್ಲಿ ಎಂದು ತಿಳಿದಾಗ ನಮ್ಮ ಬದುಕಿನ ಮಿಥ್ಯೆ ಎಲ್ಲಿದೆ ಎಂದು ವೇದ್ಯವಾಗುತ್ತದೆ. ನಮ್ಮ ಬದುಕಿನ ಓರೆಕೋರೆಗಳನ್ನು ತಿದ್ದಿಕೊಳ್ಳಲು ರಾಮಾಯಣ ಸೋಪಾನ. ಇಹಕ್ಕೂ ರಾಮಾಯಣದ ಮಾರ್ಗದರ್ಶನವಿದೆ.

ಸಂಕ್ಷೇಪ ರಾಮಾಯಣವು ನಮ್ಮೆಲ್ಲರ ನಾಲಗೆಯಲ್ಲಿ ನಲಿದಾಡಬೇಕು ಎಂಬುದು ಶ್ರೀರಾಮಚಂದ್ರಾಪುರಮಠದ ಸಂಕಲ್ಪ. ಸಂಕ್ಷೇಪ ರಾಮಾಯಣವನ್ನು ಆಡಿ, ಪಾಡಿ, ನಲಿದಾಡಿ ಅದರ ತತ್ತ್ವವನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಸಂಕ್ಷೇಪ ರಾಮಾಯಣ ಕಂಠಗತವಾಗಬೇಕು; ಹೃದ್ಗತವಾಗಬೇಕು; ಆತ್ಮಗತವಾಗಬೇಕು.

'ಖೇಲತಿ ಮಮ ಹೃದಯೇ ರಾಮಃ' ಎಂದು ಸಂತರು ಹೇಳಿದ ಹಾಗೆ ರಾಮ ನಮ್ಮ ಹೃದಯದ ಅಂಗಳದಲ್ಲಿ ನಲಿದಾಡಬೇಕು. ಆ ಆಟ ನಮ್ಮ ಬಾಳಾಟದ ಗೋಳಾಟವನ್ನು ದೂರ ಮಾಡಿ ಅಯೋಧ್ಯೆಯ ಪರಮೋತ್ಕೃಷ್ಟ ಆನಂದದ ನೆಲೆಯಲ್ಲಿ ನಮ್ಮನ್ನು ನೆಲೆ ನಿಲ್ಲಿಸಬೇಕು. ನಾವೆಂದೂ ಆ ಆನಂದದ ನೆಲೆಯಿಂದ ಜಾರದೇ ಇರೋಣ. ಸಂಕ್ಷೇಪರಾಮಾಯಣ ನಮ್ಮ ಬದುಕಿನ ವಿಸ್ತಾರವನ್ನು ತೆರೆದು ತೋರಿಸಲಿ. ಬದುಕಿನ ಸತ್ಯತೆ, ಬದುಕಿನ ಮಾಂಗಲ್ಯ, ಬದುಕಿನ ಸೌಂದರ್ಯ- ಇವೆಲ್ಲದರ ದರ್ಶನ ನಮಗಾಗುವಂತೆ ಮಾಡಲಿ.

ಆದಿಮಂಗಲ

ವಾಗೀಶಾದ್ಯಾಃ ಸುಮನಸಃ ಸರ್ವಾರ್ಥಾನಾಮುಪಕ್ರಮೇ।
ಯಂ ನತ್ವಾ ಕೃತಕೃತ್ಯಾಃ ಸ್ಯುಸ್ತಂ ನಮಾಮಿ ಗಜಾನನಮ್॥

★

ಅಖಂಡಮಂಡಲಾಕಾರಂ ವ್ಯಾಪ್ತಂ ಯೇನ ಚರಾಚರಮ್।
ತತ್ಪದಂ ದರ್ಶಿತಂ ಯೇನ ತಸ್ಮೈ ಶ್ರೀಗುರುವೇ ನಮಃ॥

★

ಕೂಜಂತಂ ರಾಮ ರಾಮೇತಿ ಮಧುರಂ ಮಧುರಾಕ್ಷರಮ್।
ಆರುಹ್ಯ ಕವಿತಾಶಾಖಾಂ ವಂದೇ ವಾಲ್ಮೀಕಿಕೋಕಿಲಮ್॥

★

ಗೋಷ್ಪದೀಕೃತವಾರಾಶಿಂ ಮಶಕೀಕೃತರಾಕ್ಷಸಮ್।
ರಾಮಾಯಣಮಹಾಮಾಲಾರತ್ನಂ ವಂದೇಽನಿಲಾತ್ಮಜಮ್॥

★

ಆಪದಾಮಪಹರ್ತಾರಂ ದಾತಾರಂ ಸರ್ವಸಂಪದಾಮ್।
ಲೋಕಾಭಿರಾಮಂ ಶ್ರೀರಾಮಂ ಭೂಯೋ ಭೂಯೋ ನಮಾಮ್ಯಹಮ್॥

★

ರಾಮಂ ರಾಮಾನುಜಂ ಸೀತಾಂ ಭರತಂ ಭರತಾನುಜಮ್।
ಸುಗ್ರೀವಂ ವಾಯುಸೂನುಂ ಚ ಪ್ರಣಮಾಮಿ ಪುನಃ ಪುನಃ॥

ಬ್ರಹ್ಮಾದಿ ದೇವತೆಗಳು ಎಲ್ಲ ಕಾರ್ಯಗಳ ಆರಂಭದಲ್ಲೂ ಯಾರನ್ನು ನಮಿಸಿ ಕೃತಕೃತ್ಯರಾಗುತ್ತಾರೋ, ಆ ವಿಘ್ನನಿವಾರಕನಾದ ಮಹಾಗಣಪತಿಯನ್ನು ಪೊಡಮಡುತ್ತೇನೆ.

★

ಯಾರಿಂದ ಚರಾಚರವಾದ ಅಖಂಡವಾದ ಸೃಷ್ಟಿಯು ವ್ಯಾಪಿಸಲ್ಪಟ್ಟಿದೆಯೋ, ಅದರ ಮೂಲವನ್ನು ಯಾರು ತೋರಿಸಿದ್ದಾರೋ, ಅಂತಹ ಶ್ರೀಗುರುವನ್ನು ನಮಿಸುತ್ತೇನೆ.

★

ಕಾವ್ಯವೆಂಬ ಕೊಂಬೆಯನ್ನೇರಿ ರಾಮ ರಾಮ ಎಂಬುದಾಗಿ ಇಂಪಾಗಿ ನುಲಿಯುವ ವಾಲ್ಮೀಕಿ ಎಂಬ ಕೋಗಿಲೆಯನ್ನು ನಮಿಸುತ್ತೇನೆ.

★

ಮಹಾಸಮುದ್ರವನ್ನೇ ಹಸುವಿನ ಹೆಜ್ಜೆಯಂತೆ ಚಿಕ್ಕದಾಗಿಸಿದ, ರಾಕ್ಷಸ ಗುಂಪನ್ನೇ ಸೊಳ್ಳೆಯಂತೆ ಹೊಸಕಿ ಹಾಕಿದ, ರಾಮಾಯಣ ಮಹಾಮಾಲೆಯಲ್ಲಿ ರತ್ನದಂತೆ ಹೊಳೆಯುತ್ತಿರುವ ವಾಯುಪುತ್ರನಾದ ಆಂಜನೇಯನನ್ನು ನಮಿಸುತ್ತೇನೆ.

★

ಎಲ್ಲ ವಿಧದ ಆಪತ್ತುಗಳನ್ನೂ ನಿವಾರಿಸುವ, ಸಕಲ ಸಂಪತ್ತುಗಳನ್ನೂ ನೀಡುವ , ಸಮಸ್ತ ಲೋಕಕ್ಕೂ ಮನೋಹರನಾದ ಶ್ರೀರಾಮನನ್ನು ಪುನಃ ಪುನಃ ನಮಿಸುತ್ತೇನೆ.

★

ಶ್ರೀರಾಮನನ್ನೂ , ಲಕ್ಷ್ಮಣನನ್ನೂ, ಸೀತಾಮಾತೆಯನ್ನೂ, ಭರತನನ್ನೂ, ಶತ್ರುಘ್ನನನ್ನೂ, ಸುಗ್ರೀವನನ್ನೂ, ವಾಯುಪುತ್ರನಾದ ಹನುಮಂತನನ್ನೂ ಮತ್ತೆ ಮತ್ತೆ ನಮಿಸುತ್ತೇನೆ.

ತಪಸ್ಸ್ವಾಧ್ಯಾಯನಿರತಂ ತಪಸ್ವೀ ವಾಗ್ವಿದಾಂ ವರಮ್।
ನಾರದಂ ಪರಿಪಪ್ರಚ್ಛ ವಾಲ್ಮೀಕಿರ್ಮುನಿಪುಂಗವಮ್ ॥ 1 ॥

★

ಕೋನ್ವಸ್ಮಿನ್ ಸಾಂಪ್ರತಂ ಲೋಕೇ ಗುಣವಾನ್ ಕಶ್ಚ ವೀರ್ಯವಾನ್।
ಧರ್ಮಜ್ಞಶ್ಚ ಕೃತಜ್ಞಶ್ಚ ಸತ್ಯವಾಕ್ಯೋ ದೃಢವ್ರತಃ ॥ 2॥

★

ಚಾರಿತ್ರೇಣ ಚ ಕೋ ಯುಕ್ತಃ ಸರ್ವಭೂತೇಷು ಕೋ ಹಿತಃ।
ವಿದ್ವಾನ್ ಕಃ ಕಃ ಸಮರ್ಥಶ್ಚ ಕಶ್ಚೈಕಪ್ರಿಯದರ್ಶನಃ ॥ 3॥

★

ಆತ್ಮವಾನ್ ಕೋ ಜಿತಕ್ರೋಧೋ ದ್ಯುತಿಮಾನ್ ಕೋಽನಸೂಯಕಃ।
ಕಸ್ಯ ಬಿಭ್ಯತಿ ದೇವಾಶ್ಚ ಜಾತರೋಷಸ್ಯ ಸಂಯುಗೇ ॥ 4 ॥

★

ಏತದಿಚ್ಛಾಮ್ಯಹಂ ಶ್ರೋತುಂ ಪರಂ ಕೌತೂಹಲಂ ಹಿ ಮೇ।
ಮಹರ್ಷೇ ತ್ವಂ ಸಮರ್ಥೋಽಸಿ ಜ್ಞಾತುಮೇವಂವಿಧಂ ನರಮ್॥5॥

★

ಸಂಕ್ಷೇಪ ರಾಮಾಯಣ

ನಾರದಮುನಿಗಳು ತಪಸ್ಸು ಮತ್ತು ವೇದಾಧ್ಯಯನ ಇವುಗಳಲ್ಲಿ ಸದಾ ಆಸಕ್ತಿಯುಳ್ಳವರು, ಉತ್ತಮವಾಗ್ಮಿಗಳು. ಮುನಿಶ್ರೇಷ್ಠರಾದ ಆ ನಾರದರನ್ನು ಕುರಿತು ಒಂದು ದಿನ ವಾಲ್ಮೀಕಿ ಮಹರ್ಷಿಗಳು ಹೀಗೆ ಕೇಳಿದರು.

★

''ನಾರದ ಮುನಿಗಳೇ, ಪ್ರಕೃತ ಈ ಲೋಕದಲ್ಲಿ ಗುಣಶಾಲಿಯೂ, ವೀರನೂ, ಧರ್ಮಜ್ಞನೂ, ಕೃತಜ್ಞನೂ, ಸತ್ಯವನ್ನೇ ಹೇಳತಕ್ಕವನೂ ಆದ ಒಬ್ಬ ಮನುಷ್ಯನಿದ್ದಾನೆಯೇ?

★

ಆತನು ಸದಾಚಾರ ಸಂಪನ್ನನೂ, ಸಕಲ ಜೀವಿಗಳಿಗೂ ಹಿತವನ್ನು ಕೋರತಕ್ಕವನೂ, ವಿದ್ವಾಂಸನೂ, ಕಾರ್ಯದಕ್ಷನೂ ಆಗಿರಬೇಕು. ಹಾಗೆಯೇ ಆತನನ್ನು ನೋಡಿದರೆ ಎಲ್ಲರಿಗೂ ಸಂತೋಷವಾಗಬೇಕು. ಅಂತಹ ಪುರುಷನು ಯಾರು?

★

ಅವನು ಧೀರನೂ, ಜಿತಕ್ರೋಧನೂ, ತೇಜಸ್ವಿಯೂ, ಅಸೂಯೆಯಿಲ್ಲದವನೂ ಆಗಿರಬೇಕು. ಅಲ್ಲದೆ ಕುಪಿತನಾಗಿ ಯುದ್ಧಕ್ಕೆ ನಿಂತರೆ ದೇವತೆಗಳೂ ಸಹ ಹೆದರಿ ನಡುಗಬೇಕು. ಅಂತಹವನು ಯಾವನಾದರೂ ಇದ್ದಾನೆಯೇ?

★

ಅಂತಹ ಪರಾಕ್ರಮಿ ಯಾರು? ಇಷ್ಟು ಗುಣ ಒಬ್ಬನಲ್ಲಿಯೇ ಇರಬೇಕು. ಅಂತಹ ಮಹಾಪುರುಷನು ಎಲ್ಲಾದರೂ ಇದ್ದಾನೆಯೇ ನಾರದರೇ? ಇದ್ದರೆ ಆತನ ವೃತ್ತಾಂತವನ್ನು ಕೇಳಲು ನನಗೆ ಬಹಳ ಕುತೂಹಲವಿದೆ. ಮಹರ್ಷಿಗಳೇ, ಇಂತಹ ಸರ್ವಗುಣಸಂಪನ್ನರಾದ ಮನುಷ್ಯನು ಈ ಲೋಕದಲ್ಲಿದ್ದಾನೆಯೇ? ಇದನ್ನು ತಿಳಿಯಲು ನೀವೇ ಸಮರ್ಥರು'' ಎಂದರು.

★

ಶ್ರುತ್ವಾ ಚೈತತ್ ತ್ರಿಲೋಕಜ್ಞೋ ವಾಲ್ಮೀಕೇರ್ನಾರದೋ ವಚಃ।
ಶ್ರೂಯತಾಮಿತಿ ಚಾಮಂತ್ರ್ಯ ಪ್ರಹೃಷ್ಟೋ ವಾಕ್ಯಮಬ್ರವೀತ್॥6॥

★

ಬಹವೋ ದುರ್ಲಭಾಶ್ಚೈವ ಯೇ ತ್ವಯಾ ಕೀರ್ತಿತಾ ಗುಣಾಃ।
ಮುನೇ ವಕ್ಷ್ಯಾಮ್ಯಹಂ ಬುದ್ಧ್ವಾ ತೈರ್ಯುಕ್ತಃ ಶ್ರೂಯತಾಂ ನರಃ॥7॥

★

ಇಕ್ಷ್ವಾಕುವಂಶಪ್ರಭವೋ ರಾಮೋ ನಾಮ ಜನೈಃ ಶ್ರುತಃ।
ನಿಯತಾತ್ಮಾ ಮಹಾವೀರ್ಯೋ ದ್ಯುತಿಮಾನ್ ಧೃತಿಮಾನ್ ವಶೀ ॥8॥

★

ಬುದ್ಧಿಮಾನ್ ನೀತಿಮಾನ್ ವಾಗ್ಮೀ ಶ್ರೀಮಾಂಛತ್ರುನಿಬರ್ಹಣಃ।
ವಿಪುಲಾಂಸೋ ಮಹಾಬಾಹುಃ ಕಂಬುಗ್ರೀವೋ ಮಹಾಹನುಃ ॥9॥

★

ಮಹೋರಸ್ಕೋ ಮಹೇಷ್ವಾಸೋ ಗೂಢಜತ್ರುರರಿಂದಮಃ।
ಆಜಾನುಬಾಹುಃ ಸುಶಿರಾಃ ಸುಲಲಾಟಃ ಸುವಿಕ್ರಮಃ ॥10॥

★

ಸಂಕ್ಷೇಪ ರಾಮಾಯಣ

ವಾಲ್ಮೀಕಿ ಮುನಿಗಳ ಈ ಪ್ರಶ್ನೆಯನ್ನು ಕೇಳಿ, ಮೂರುಲೋಕಗಳ ವೃತ್ತಾಂತವನ್ನೂ ಬಲ್ಲ ನಾರದರಿಗೆ ಬಹಳ ಸಂತೋಷವಾಯಿತು.

ಅವರು ''ವಾಲ್ಮೀಕಿ ಮಹರ್ಷಿಗಳೇ ಕೇಳಿರಿ'' ಎಂದು ನುಡಿದು ಇಂತೆಂದರು-

★

ನೀವು ಪಟ್ಟಿಮಾಡಿ ಹೇಳಿದ ಮಹಾಗುಣಗಳು ಬಹಳ ಇವೆ. ಇವೆಲ್ಲವೂ ಒಟ್ಟಿಗೆ ಒಬ್ಬ ವ್ಯಕ್ತಿಯಲ್ಲಿರುವುದು ದುರ್ಲಭ. ಆದರೂ, ಮುನಿಗಳೇ, ಅಂತಹ ಒಬ್ಬ ಮಹಾಪುರುಷನಿದ್ದಾನೆ. ನೀವು ಹೇಳಿದ ಗುಣಗಳು ಬಹಳವಾದರೂ ಅವುಗಳಿಂದ ಶೋಭಿತನಾದವನು ಆತನು. ಕೇಳಿರಿ -

★

ಇಕ್ಷ್ವಾಕು ವಂಶದಲ್ಲಿ ಜನಿಸಿರುವ ಆತನ ಹೆಸರು ಶ್ರೀರಾಮ. ಪ್ರಸಿದ್ಧವಾದ ಆ ಹೆಸರನ್ನು ಜನರು ಬಲ್ಲರು. ಅವನು ಜಿತೇಂದ್ರಿಯನೂ, ಮಹಾವೀರನೂ ಆಗಿದ್ದಾನೆ. ತೇಜಸ್ವಿಯೂ, ಧೀರನೂ, ಮನೋಜಯವುಳ್ಳವನೂ ಆಗಿದ್ದಾನೆ.

★

ಶ್ರೀರಾಮನು ಬುದ್ಧಿವಂತ, ನೀತಿವಂತ, ಶ್ರೇಷ್ಠನಾದ ವಾಗ್ಮಿ, ಐಶ್ವರ್ಯವಂತ, ಶತ್ರುಗಳನ್ನು ಧ್ವಂಸಮಾಡುವ ಬಲಶಾಲಿ. ಅವನಿಗೆ ವಿಶಾಲವಾದ ಹೆಗಲುಗಳು, ಬಲಿಷ್ಠವಾದ ಬಾಹುಗಳು, ಮೂರು ರೇಖೆಗಳಿರುವ ಶಂಖದಂತಹ ಸುಂದರವಾದ ಕಂಠವಿದೆ. ಪುಷ್ಟವಾದ ಗಂಡಸ್ಥಳಗಳಿವೆ.

★

ಆತನ ಎದೆ ಅಗಲವಾದದ್ದು. ಮಹತ್ತರವಾದ ಕೋದಂಡ ಧನುಸ್ಸನ್ನು ಹಿಡಿದಿರುತ್ತಾನೆ. ಭುಜದ ಕೀಲುಗಳು ಕಾಣಿಸದಂತೆ ತುಂಬಿಕೊಂಡ ಭುಜಗಳಿವೆ. ಆ ವೀರನು ಆಜಾನುಬಾಹುವಾಗಿದ್ದಾನೆ. ಶ್ರೀರಾಮನ ಶಿರಸ್ಸು ಹಣೆಗಳು ಬಹು ಸುಂದರವಾಗಿವೆ. ಆತನು ಗಂಭೀರವಾಗಿ ನಡೆಯತಕ್ಕವನು.

★

ಸಮಃ ಸಮವಿಭಕ್ತಾಂಗಃ ಸ್ನಿಗ್ಧವರ್ಣಃ ಪ್ರತಾಪವಾನ್।
ಪೀನವಕ್ಷಾ ವಿಶಾಲಾಕ್ಷೋ ಲಕ್ಷ್ಮೀವಾಂಛುಭಲಕ್ಷಣಃ ॥11॥

★

ಧರ್ಮಜ್ಞಃ ಸತ್ಯಸಂಧಶ್ಚ ಪ್ರಜಾನಾಂ ಚ ಹಿತೇ ರತಃ।
ಯಶಸ್ವೀ ಜ್ಞಾನಸಂಪನ್ನಃ ಶುಚಿರ್ವಶ್ಯಃ ಸಮಾಧಿಮಾನ್॥12॥

★

ಪ್ರಜಾಪತಿಸಮಃ ಶ್ರೀಮಾನ್ ಧಾತಾ ರಿಪುನಿಷೂದನಃ ।
ರಕ್ಷಿತಾ ಜೀವಲೋಕಸ್ಯ ಧರ್ಮಸ್ಯ ಪರಿರಕ್ಷಿತಾ ॥ 13॥

★

ರಕ್ಷಿತಾ ಸ್ವಸ್ಯ ಧರ್ಮಸ್ಯ ಸ್ವಜನಸ್ಯ ಚ ರಕ್ಷಿತಾ।
ವೇದವೇದಾಂಗತತ್ತ್ವಜ್ಞೋ ಧನುರ್ವೇದೇ ಚ ನಿಷ್ಠಿತಃ॥14॥

★

ಸರ್ವಶಾಸ್ತ್ರಾರ್ಥತತ್ತ್ವಜ್ಞಃ ಸ್ಮೃತಿಮಾನ್ ಪ್ರತಿಭಾನವಾನ್।
ಸರ್ವಲೋಕಪ್ರಿಯಃ ಸಾಧುರದೀನಾತ್ಮಾ ವಿಚಕ್ಷಣಃ॥15॥

★

ಸಂಕ್ಷೇಪ ರಾಮಾಯಣ

ಶ್ರೀರಾಮನ ದೇಹವು ಬಹಳ ಎತ್ತರವೂ ಅಲ್ಲ, ಹ್ರಸ್ವವೂ ಅಲ್ಲ. ಸಮಕಟ್ಟಾದ ದೇಹ. ಕೈಕಾಲು ಮುಂತಾದ ಅಂಗಗಳು ತಕ್ಕ ಅಳತೆಯಲ್ಲಿ ಪರಸ್ಪರ ಹೊಂದಿಕೊಂಡಿವೆ. ಆ ಪ್ರತಾಪಶಾಲಿಯ ಮೈಬಣ್ಣ ಹೊಳೆಯುವಂತಹುದು. ವಿಶಾಲವಾದ ಎದೆ, ವಿಶಾಲವಾದ ಸುಂದರ ನೇತ್ರಗಳು. ಮನೋಹರವಾದ ಸೌಂದರ್ಯವುಳ್ಳವನು. ಒಳ್ಳೆಯ ದೇಹಲಕ್ಷಣಗಳುಳ್ಳವನು.

★

ವಾಲ್ಮೀಕಿ ಮುನಿಗಳೇ, ನೀವು ಕೇಳಿದ ಸದ್ಗುಣಗಳೆಲ್ಲವೂ ಅವನಲ್ಲಿವೆ. ಅವನು ಧರ್ಮಜ್ಞ, ಸತ್ಯಸಂಧ. ಪ್ರಜಾಹಿತಕಾರ್ಯಗಳಲ್ಲಿ ಸದಾ ನಿರತನಾಗಿರುತ್ತಾನೆ. ಶ್ರೀರಾಮನು ಕೀರ್ತಿಶಾಲಿ. ಯುಕ್ತಾಯುಕ್ತವಿವೇಕಜ್ಞಾನವುಳ್ಳವನು. ಶುದ್ಧ ಹೃದಯನೂ, ಗುರುಹಿರಿಯರಿಗೆ ವಿಧೇಯನೂ ಆಗಿದ್ದಾನೆ. ಸಮಾಧಾನಗುಣವುಳ್ಳವನು, ದುಡುಕತಕ್ಕವನಲ್ಲ.

★

ಅವನು ಸಾಕ್ಷಾತ್ ಬ್ರಹ್ಮನಂತೆ ವರ್ಚಸ್ವಿಯಾಗಿದ್ದಾನೆ. ಶಿಷ್ಟರನ್ನು ರಕ್ಷಿಸಿ, ದುಷ್ಟರನ್ನು ನಿಗ್ರಹಿಸತಕ್ಕವನು. ಜೀವಲೋಕವನ್ನೇ ರಕ್ಷಿಸಬಲ್ಲವನು. ಅಧರ್ಮವು ಇಣುಕದಂತೆ ಧರ್ಮವನ್ನು ರಕ್ಷಿಸತಕ್ಕವನು.

★

ಆತನು ಸ್ವಧರ್ಮವನ್ನೂ, ತನ್ನನ್ನು ನಂಬಿದ ಜನರನ್ನೂ ಪಾಲಿಸುತ್ತಿದ್ದಾನೆ. ವಾಲ್ಮೀಕಿ ಮುನಿಗಳೇ, ಶ್ರೀರಾಮನು ವೇದವೇದಾಂಗಗಳೆಲ್ಲವನ್ನೂ ಚೆನ್ನಾಗಿ ತಿಳಿದುಕೊಂಡಿದ್ದಾನೆ. ಧನುರ್ವೇದದಲ್ಲಿ ಗಟ್ಟಿಗ.

★

ಅಷ್ಟೇ ಅಲ್ಲ, ಸರ್ವಶಾಸ್ತ್ರಗಳ ತತ್ತ್ವಾರ್ಥಗಳನ್ನು ಸ್ಪಷ್ಟವಾಗಿ ತಿಳಿದುಕೊಂಡಿದ್ದಾನೆ. ಉತ್ತಮವಾದ ಸ್ಮರಣಶಕ್ತಿ ಅವನಿಗಿದೆ. ಪ್ರತಿಭಾಶಾಲಿ. ಸಕಲ ಜನರೂ ಅವನನ್ನು ಪ್ರೀತಿಸುತ್ತಾರೆ. ತುಂಬ ಸಾಧು ಸ್ವಭಾವದವನು. ಆದರೆ ದೈನ್ಯದಿಂದ ತಲೆಬಾಗತಕ್ಕವನಲ್ಲ. ಒಳ್ಳೆಯ ಕಾರ್ಯದಕ್ಷ.

★

ಸಂಕ್ಷೇಪ ರಾಮಾಯಣ

ಸರ್ವದಾಭಿಗತಃ ಸದ್ಭಿಃ ಸಮುದ್ರ ಇವ ಸಿಂಧುಭಿಃ।
ಆರ್ಯಃ ಸರ್ವಸಮಶ್ಚೈವ ಸದೈವ ಪ್ರಿಯದರ್ಶನಃ ॥16॥

★

ಸ ಚ ಸರ್ವಗುಣೋಪೇತಃ ಕೌಸಲ್ಯಾನಂದವರ್ಧನಃ।
ಸಮುದ್ರ ಇವ ಗಾಂಭೀರ್ಯೇ ಧೈರ್ಯೇಣ ಹಿಮವಾನಿವ ॥17॥

★

ವಿಷ್ಣುನಾ ಸದೃಶೋ ವೀರ್ಯೇ ಸೋಮವತ್ ಪ್ರಿಯದರ್ಶನಃ।
ಕಾಲಾಗ್ನಿಸದೃಶಃ ಕ್ರೋಧೇ ಕ್ಷಮಯಾ ಪೃಥಿವೀಸಮಃ ॥18॥

★

ಧನದೇನ ಸಮಸ್ತ್ಯಾಗೇ ಸತ್ಯೇ ಧರ್ಮ ಇವಾಪರಃ ।
ತಮೇವಂ ಗುಣಸಂಪನ್ನಂ ರಾಮಂ ಸತ್ಯಪರಾಕ್ರಮಮ್ ॥19॥

★

ಸಂಕ್ಷೇಪ ರಾಮಾಯಣ

ನದಿಗಳು ಸಮುದ್ರದ ಕಡೆಗೆ ಸದಾ ಧಾವಿಸಿ ಬರುವಂತೆ ಸಜ್ಜನರು ಶ್ರೀರಾಮನ ಬಳಿಗೆ ಬರುತ್ತಲೇ ಇರುತ್ತಾರೆ. ಅವನು ತನ್ನ ಸಚ್ಚಾರಿತ್ರ್ಯದಿಂದ ಗೌರವವನ್ನು ಗಳಿಸಿಕಂಡ ಆರ್ಯನು. ಎಲ್ಲರಲ್ಲಿಯೂ ಪಕ್ಷಪಾತವಿಲ್ಲದೆ ಸಮತೆಯಿಂದ ವರ್ತಿಸುತ್ತಾನೆ. ಅವನನ್ನು ಯಾವಾಗ ನೋಡಿದರೂ ಆನಂದವಾಗುವುದು.

★

ತಾಯಿಯಾದ ಕೌಸಲ್ಯಾದೇವಿಗೆ ಆನಂದವನ್ನುಂಟು ಮಾಡುವ ಪುತ್ರನಾಗಿದ್ದಾನೆ. ಏಕೆಂದರೆ, ಅವನು ಸಮಸ್ತ ಸದ್ಗುಣಗಳಿಂದ ಕೂಡಿದವನು. ಗಾಂಭೀರ್ಯದಲ್ಲಿ ಸಮುದ್ರದಂತೆಯೂ, ಧೈರ್ಯದಲ್ಲಿ ಹಿಮವಂತನಂತೆಯೂ ಇದ್ದಾನೆ.

★

ವಿಷ್ಣುವಿನಂತೆ ಪರಾಕ್ರಮಿ. ಚಂದ್ರನಂತೆ ಪ್ರಿಯದರ್ಶನ. ಯಾವುದಾದರೂ ನಿಮಿತ್ತದಿಂದ ಸಿಟ್ಟುಬಂದಿತೆಂದರೆ ಕಾಲಾಗ್ನಿಯಂತೆ ಆಗಿಬಿಡುತ್ತಾನೆ. ತಾಳ್ಮೆಯಲ್ಲಿ ಭೂದೇವಿಗೆ ಸಮಾನ.

★

ವಾಲ್ಮೀಕಿ ಮುನಿಗಳೇ, ಕುಬೇರನಂತೆ ಪುಷ್ಕಳವಾಗಿ ದಾನ ಮಾಡುವ ಸ್ವಭಾವದವನು. ಸತ್ಯಸಂಧತೆಯಲ್ಲಂತೂ ಸಾಕ್ಷಾತ್ ಧರ್ಮಪುರುಷನೇ. ಇಂತಹ ಗುಣಸಂಪನ್ನನೂ, ಸತ್ಯ ಪರಾಕ್ರಮನೂ ಆದ ಪ್ರಿಯಪುತ್ರನಿಗೆ ಯುವರಾಜ ಪದವಿಯನ್ನಿತ್ತು ಪಟ್ಟಾಭಿಷೇಕವನ್ನು ಮಾಡಬೇಕೆಂದು ದಶರಥ ಮಹಾರಾಜನು ಅಪೇಕ್ಷಿಸಿದನು.

★

ಜ್ಯೇಷ್ಠಂ ಶ್ರೇಷ್ಠಗುಣೈರ್ಯುಕ್ತಂ ಪ್ರಿಯಂ ದಶರಥಃ ಸುತಮ್।
ಪ್ರಕೃತೀನಾಂ ಹಿತೈರ್ಯುಕ್ತಂ ಪ್ರಕೃತಿಪ್ರಿಯಕಾಮ್ಯಯಾ॥20॥

ಯೌವರಾಜ್ಯೇನ ಸಂಯೋಕ್ತುಮೈಚ್ಛತ್ ಪ್ರೀತ್ಯಾ ಮಹೀಪತಿಃ।
ತಸ್ಯಾಭಿಷೇಕಸಂಭಾರಾನ್ ದೃಷ್ಟ್ವಾ ಭಾರ್ಯಾಥ ಕೈಕಯೀ॥ 21॥

★

ಪೂರ್ವಂ ದತ್ತವರಾ ದೇವೀ ವರಮೇನಮಯಾಚತ।
ವಿವಾಸನಂ ಚ ರಾಮಸ್ಯ ಭರತಸ್ಯಾಭಿಷೇಚನಮ್॥22॥

★

ಸ ಸತ್ಯವಚನಾದ್ರಾಜಾ ಧರ್ಮಪಾಶೇನ ಸಂಯತಃ।
ವಿವಾಸಯಾಮಾಸ ಸುತಂ ರಾಮಂ ದಶರಥಃ ಪ್ರಿಯಮ್॥23॥

ಸ ಜಗಾಮ ವನಂ ವೀರಃ ಪ್ರತಿಜ್ಞಾಮನುಪಾಲಯನ್।
ಪಿತುರ್ವಚನನಿರ್ದೇಶಾತ್ ಕೈಕೇಯ್ಯಾಃ ಪ್ರಿಯಕಾರಣಾತ್॥24॥

★

ಸಂಕ್ಷೇಪ ರಾಮಾಯಣ

ಶ್ರೀರಾಮನಾದರೋ ದಶರಥನಿಗೆ ಅತ್ಯಂತ ಪ್ರಿಯನೂ, ಶ್ರೇಷ್ಠಗುಣಯುಕ್ತನೂ ಆದ ಜ್ಯೇಷ್ಠಪುತ್ರನಾಗಿದ್ದನು ಮತ್ತು ಶ್ರೀರಾಮನು ಪ್ರಜೆಗಳ ಹಿತವನ್ನೇ ಬಯಸತಕ್ಕವನಾಗಿದ್ದನು. ಆದ್ದರಿಂದ ಪ್ರಜೆಗಳೆಲ್ಲರೂ ಆತನನ್ನೇ ಯುವರಾಜನಾಗಬೇಕೆಂದು ಬಯಸಿದ್ದರು. ಪ್ರಜೆಗಳಿಗೆ ಸಂತೋಷವಾಗಲೆಂದೇ ದಶರಥನು ಶ್ರೀರಾಮನ ಪಟ್ಟಾಭಿಷೇಕವನ್ನು ನಿಶ್ಚಯಿಸಿದ್ದನು. ಆದ್ದರಿಂದ ಪಟ್ಟಾಭಿಷೇಕಕ್ಕೆ ಬೇಕಾದ ಸಿದ್ಧತೆಗಳಾದವು. ದಶರಥನ ಇನ್ನೊಬ್ಬ ಪತ್ನಿಯಾದ ಕೈಕೇಯಿಗೆ ಇದೆಲ್ಲವೂ ತಿಳಿಯಿತು.

★

ಅವಳಿಗೆ ದಶರಥನು ಹಿಂದೆ ಎರಡು ವರಗಳನ್ನು ಕೊಟ್ಟಿದ್ದನು. (ಯಾವ ವರಗಳೆಂಬುದನ್ನು ಸಮಯ ಬಂದಾಗ ತಿಳಿಸುತ್ತೇನೆಂದು ಅವಳು ಹೇಳಿದ್ದಳು.) ಇದೇ ಸಮಯವೆಂದು ಅವಳು ಆ ವರಗಳನ್ನು ಬೇಡಿದಳು. ಯಾವುವೆಂದರೆ, ರಾಮನನ್ನು ರಾಜ್ಯದಿಂದ ಹೊರಕ್ಕೆ ಕಳಿಸಬೇಕು ಮತ್ತು ತನ್ನ ಮಗ ಭರತನಿಗೆ ಯುವರಾಜ ಪಟ್ಟಾಭಿಷೇಕವನ್ನು ಮಾಡಬೇಕು. ಇವು ಆಕೆ ಬೇಡಿದ ವರಗಳು.

★

ದಶರಥನು ಸತ್ಯಸಂಧನಾದ್ದರಿಂದ ಧರ್ಮಪಾಶಕ್ಕೆ ಕಟ್ಟುಬಿದ್ದು ತನ್ನ ಪ್ರೀತಿಪಾತ್ರ ಪುತ್ರನನ್ನು ರಾಜ್ಯದಿಂದ ಹೊರಗೆ ಕಳಿಸಬೇಕಾಯಿತು. ಶ್ರೀರಾಮನು ಪರಾಕ್ರಮಿಯಾದರೂ ತಂದೆಯ ಮಾತನ್ನು ಮೀರುವುದಿಲ್ಲವೆಂಬ ತನ್ನ ಪ್ರತಿಜ್ಞೆಯನ್ನು ನಡೆಸುವುದಕ್ಕಾಗಿಯೂ , ಅದರಿಂದ ಕೈಕೇಯಿಗೆ ಸಂತೋಷವಾಗುವುದೆಂಬ ಕಾರಣದಿಂದಲೂ ವನವಾಸಕ್ಕಾಗಿ ಹೊರಟುಬಿಟ್ಟನು.

★

ತಂ ವ್ರಜಂತಂ ಪ್ರಿಯೋ ಭ್ರಾತಾ ಲಕ್ಷ್ಮಣೋಽನುಜಗಾಮ ಹ।
ಸ್ನೇಹಾದ್ವಿನಯಸಂಪನ್ನಃ ಸುಮಿತ್ರಾನಂದವರ್ಧನಃ॥25॥

ಭ್ರಾತರಂ ದಯಿತೋ ಭ್ರಾತುಃ ಸೌಭ್ರಾತ್ರಮನುದರ್ಶಯನ್।
ರಾಮಸ್ಯ ದಯಿತಾ ಭಾರ್ಯಾ ನಿತ್ಯಂ ಪ್ರಾಣಸಮಾ ಹಿತಾ॥26॥

★

ಜನಕಸ್ಯ ಕುಲೇ ಜಾತಾ ದೇವಮಾಯೇವ ನಿರ್ಮಿತಾ।
ಸರ್ವಲಕ್ಷಣಸಂಪನ್ನಾ ನಾರೀಣಾಮುತ್ತಮಾ ವಧೂಃ॥ 27॥

ಸೀತಾಪ್ಯನುಗತಾ ರಾಮಂ ಶಶಿನಂ ರೋಹಿಣೀ ಯಥಾ।
ಪೌರೈರನುಗತೋ ದೂರಂ ಪಿತ್ರಾ ದಶರಥೇನ ಚ॥ 28॥

★

ಶೃಂಗವೇರಪುರೇ ಸೂತಂ ಗಂಗಾಕೂಲೇ ವ್ಯಸರ್ಜಯತ್।
ಗುಹಮಾಸಾದ್ಯ ಧರ್ಮಾತ್ಮಾ ನಿಷಾದಾಧಿಪತಿಂ ಪ್ರಿಯಮ್॥ 29॥

ಗುಹೇನ ಸಹಿತೋ ರಾಮೋ ಲಕ್ಷ್ಮಣೇನ ಚ ಸೀತಯಾ।
ತೇ ವನೇನ ವನಂ ಗತ್ವಾ ನದೀಸ್ತೀರ್ತ್ವಾ ಬಹೂದಕಾಃ॥ 30॥

★

ಆಗ ಶ್ರೀರಾಮನ ಪ್ರೀತಿಯ ತಮ್ಮನಾದ ಲಕ್ಷ್ಮಣನೂ ಅಣ್ಣನ ಮೇಲಿರುವ ಸ್ನೇಹದಿಂದ ಅವನೊಡನೆ ತಾನೂ ಅರಣ್ಯಕ್ಕೆ ಹೋಗಲು ಸಿದ್ಧನಾಗಿ ಬಂದನು. ಲಕ್ಷ್ಮಣನು ವಿನಯಸಂಪನ್ನನಲ್ಲದೆ, ತಾಯಿಯಾದ ಸುಮಿತ್ರೆಗೆ ಅತ್ಯಂತ ಪ್ರಿಯನಾದವನು. ಲಕ್ಷ್ಮಣನ ವರ್ತನೆ ಅಣ್ಣತಮ್ಮಂದಿರಲ್ಲಿರಬೇಕಾದ ಸೌಭ್ರಾತ್ರಕ್ಕೆ ನಿದರ್ಶನ.

ಶ್ರೀರಾಮನಿಗೆ ಅತ್ಯಂತ ಪ್ರಿಯಳಾದ ಪತ್ನಿ ಸೀತೆ. ಅವಳು ಸದಾ ಪತಿಯ ಹಿತವನ್ನೇ ಬಯಸುತ್ತ ಅವನಿಗೆ ಪ್ರಾಣದಂತೆ ಪ್ರಿಯಳಾದ ದಯಿತೆ.

★

ಅವಳು ಜನಕರಾಜನ ಪರಿಶುದ್ಧವಾದ ವಂಶದಲ್ಲಿ ಜನಿಸಿದವಳು. ದೇವಮಾಯೆಯೋ ಎಂಬಂತೆ ಪರಮಸುಂದರಿ. ಸರ್ವಲಕ್ಷಣಸಂಪನ್ನೆಯಾದ ಸೀತಾದೇವಿ ಸ್ತ್ರೀಯರಲ್ಲಿ ಶ್ರೇಷ್ಠಳಾದವಳು. ಚಂದ್ರನನ್ನು ರೋಹಿಣಿಯು ಹಿಂಬಾಲಿಸಿದಂತೆ, ಸೀತೆಯೂ ಶ್ರೀರಾಮನ ಹಿಂದೆ ಅರಣ್ಯವಾಸಕ್ಕಾಗಿ ಹೊರಟುಬಿಟ್ಟಳು. ಆಗ ಧಶರಥನೂ ನಗರದ ಪ್ರಜೆಗಳೂ ಶ್ರೀರಾಮನ ವಿಯೋಗವನ್ನು ಸಹಿಸಲಾರದೆ ದೂರದವರೆಗೆ ಅವರನ್ನು ಹಿಂಬಾಲಿಸುತ್ತಾ ಹೋದರು.

★

ಶ್ರೀರಾಮನು ಸೀತಾಲಕ್ಷ್ಮಣರೊಡನೆ ರಥದಲ್ಲಿ ಪ್ರಯಾಣ ಮಾಡಿ ಶೃಂಗವೇರಪುರದವರೆಗೆ ಹೋಗಿ, ರಥವನ್ನು ನಡೆಸಲು ಸಾರಥಿಯಾಗಿ ಬಂದಿದ್ದ ಸುಮಂತ್ರನನ್ನು ಗಂಗಾನದಿಯ ತೀರದಲ್ಲಿ ಹಿಂದಕ್ಕೆ ಅಯೋಧ್ಯೆಗೆ ಕಳಿಸಿದನು. ಧರ್ಮಾತ್ಮನಾದ ರಾಘವನು ಸೀತಾಲಕ್ಷ್ಮಣರೊಡನೆ ನಿಷಾದರಾಜನಾದ ಗುಹನನ್ನು ಕಂಡನು. ಗುಹನು ಶ್ರೀರಾಮನ ಪ್ರಿಯಮಿತ್ರನಾಗಿದ್ದನು.

★

ಚಿತ್ರಕೂಟಮನುಪ್ರಾಪ್ಯ ಭರದ್ವಾಜಸ್ಯ ಶಾಸನಾತ್।
ರಮ್ಯಮಾವಸಥಂ ಕೃತ್ವಾ ರಮಮಾಣಾ ವನೇ ತ್ರಯಃ।। 31।।

★

ದೇವಗಂಧರ್ವಸಂಕಾಶಾಸ್ತತ್ರ ತೇ ನ್ಯವಸನ್ ಸುಖಮ್।
ಚಿತ್ರಕೂಟಂ ಗತೇ ರಾಮೇ ಪುತ್ರಶೋಕಾತುರಸ್ತಥಾ।। 32।।

ರಾಜಾ ದಶರಥಃ ಸ್ವರ್ಗಂ ಜಗಾಮ ವಿಲಪನ್ ಸುತಮ್।
ಮೃತೇ ತು ತಸ್ಮಿನ್ ಭರತೋ ವಸಿಷ್ಠಪ್ರಮುಖೈರ್ದ್ವಿಜೈಃ।। 33।।

★

ನಿಯುಜ್ಯಮಾನೋ ರಾಜ್ಯಾಯ ನೈಚ್ಛದ್ರಾಜ್ಯಂ ಮಹಾಬಲಃ।
ಸ ಜಗಾಮ ವನಂ ವೀರೋ ರಾಮಪಾದಪ್ರಸಾದಕಃ।। 34।।

★

ಗತ್ವಾ ತು ಸ ಮಹಾತ್ಮಾನಂ ರಾಮಂ ಸತ್ಯಪರಾಕ್ರಮಮ್।
ಅಯಾಚದ್ಭ್ರಾತರಂ ರಾಮಮಾರ್ಯಭಾವಪುರಸ್ಕೃತಃ।। 35।।

ತ್ವಮೇವ ರಾಜಾ ಧರ್ಮಜ್ಞ ಇತಿ ರಾಮಂ ವಚೋಽಬ್ರವೀತ್।
ರಾಮೋಽಪಿ ಪರಮೋದಾರಃ ಸುಮುಖಃ ಸುಮಹಾಯಶಾಃ।।36।।

★

ಅನಂತರ ರಾಮ, ಲಕ್ಷ್ಮಣ, ಸೀತೆ ಈ ಮೂವರು ಒಂದು ಅಡವಿಯಿಂದ ಇನ್ನೊಂದು ಅಡವಿಗೆ ಹೋಗುತ್ತ, ನೀರಿನಿಂದ ತುಂಬಿ ಹರಿಯುತ್ತಿದ್ದ ಅನೇಕ ನದಿಗಳನ್ನು ದಾಟುತ್ತ, ಭರದ್ವಾಜ ಮುನಿಗಳ ಆದೇಶದಂತೆ ಚಿತ್ರಕೂಟಕ್ಕೆ ಹೋದರು.

★

ದೇವಗಂಧರ್ವರಿಗೆ ಸದೃಶರಾದ ಆ ಮೂವರೂ ಚಿತ್ರಕೂಟದಲ್ಲಿ ಒಂದು ಪರ್ಣಶಾಲೆಯನ್ನು ರಚಿಸಿಕೊಂಡು ಸುಖವಾಗಿದ್ದರು. ಇತ್ತ ದಶರಥರಾಜನು ಪುತ್ರವಿರಹದಿಂದ ಶೋಕಾಕ್ರಾಂತನಾಗಿ ಅಳುತ್ತ, ಹಂಬಲಿಸುತ್ತ ಸ್ವರ್ಗಸ್ಥನಾದನು. ಹೀಗೆ ದಶರಥರಾಜನು ಮೃತನಾಗಲು ವಸಿಷ್ಠಮುನಿಗಳೇ ಮೊದಲಾದ ದ್ವಿಜರು ಭರತನನ್ನು ಕೇಕಯರಾಜ್ಯದಿಂದ ಕರೆಸಿ, ರಾಜನಾಗುವಂತೆ ಪ್ರೇರೇಪಿಸಿದರು.

★

ವಸಿಷ್ಠಾದಿಗಳು ಹೇಳಿದರೂ ಮಹಾಬಲಾಢ್ಯನಾದ ಭರತನು ರಾಜನಾಗಲು ಒಪ್ಪಲಿಲ್ಲ. ಆ ವೀರನು ಅಣ್ಣನಾದ ಶ್ರೀರಾಮನ ಪಾದಗಳಿಗೆ ಅಡ್ಡಬಿದ್ದು ಆತನ ಅನುಗ್ರಹವನ್ನು ಸಂಪಾದಿಸಬೇಕೆಂದು ನಿಶ್ಚಯಿಸಿ ಅರಣ್ಯಕ್ಕೆ ಹೋದನು.

★

ಅಲ್ಲಿ ಸತ್ಯನಿಷ್ಠನೂ, ಮಹಾತ್ಮನೂ ಆದ ಶ್ರೀರಾಮನನ್ನು ಕಂಡು ''ಅಣ್ಣಾ ರಾಜಧರ್ಮವನ್ನು ಚೆನ್ನಾಗಿ ಬಲ್ಲ ನೀನೇ ಅಯೋಧ್ಯೆಯ ರಾಜ'' ಎಂದು ಹೇಳಿದನು. ವಿನಯಪೂರ್ವಕವಾಗಿ ಆರ್ಯಭಾವದಿಂದ ನೀನೇ ರಾಜನಾಗಬೇಕೆಂದು ಬೇಡಿಕೊಂಡನು.

★

ನ ಚೈಚ್ಛತ್ ಪಿತುರಾದೇಶಾದ್ರಾಜ್ಯಂ ರಾಮೋ ಮಹಾಬಲಃ।
ಪಾದುಕೇ ಚಾಸ್ಯ ರಾಜ್ಯಾಯ ನ್ಯಾಸಂ ದತ್ವಾ ಪುನಃ ಪುನಃ॥ 37॥

★

ನಿವರ್ತಯಾಮಾಸ ತತೋ ಭರತಂ ಭರತಾಗ್ರಜಃ।
ಸ ಕಾಮಮನವಾಪ್ಯೈವ ರಾಮಪಾದಾವುಪಸ್ಪೃಶನ್॥ 38॥

★

ನಂದಿಗ್ರಾಮೇಽಕರೋದ್ರಾಜ್ಯಂ ರಾಮಾಗಮನಕಾಂಕ್ಷಯಾ।
ಗತೇ ತು ಭರತೇ ಶ್ರೀಮಾನ್ ಸತ್ಯಸಂಧೋ ಜಿತೇಂದ್ರಿಯಃ॥ 39॥

★

ರಾಮಸ್ತು ಪುನರಾಲಕ್ಷ್ಯ ನಾಗರಸ್ಯ ಜನಸ್ಯ ಚ।
ತತ್ರಾಗಮನಮೇಕಾಗ್ರೋ ದಂಡಕಾನ್ ಪ್ರವಿವೇಶ ಹ॥ 40॥

★

ಉದಾರ ಸ್ವಭಾವದವನೂ,ಕೀರ್ತಿಶಾಲಿಯೂ ಆದ ಶ್ರೀರಾಮನು ಭರತನ ವಿಷಯದಲ್ಲಿ ಸ್ವಲ್ಪವೂ ಬೇಸರಿಸದೆ ಪ್ರಸನ್ನಮುಖನಾಗಿಯೇ ತಾನು ರಾಜನಾಗಲು ನಿರಾಕರಿಸಿದನು. ಆತನು ಬಲಾಢ್ಯನಾದರೂ ''ತಂದೆಯ ಆಜ್ಞೆಯಂತೆಯೇ ತಾನು ನಡೆಯತಕ್ಕವನು. ಕೊಟ್ಟ ಮಾತಿಗೆ ತಪ್ಪಿ ರಾಜ್ಯವನ್ನು ಬಯಸುವುದಿಲ್ಲ'' ಎಂದು ಹೇಳಿಬಿಟ್ಟನು.

★

ಅನಂತರ ಭರತನ ಸಮಾಧಾನಕ್ಕಾಗಿ ತನ್ನ ಪಾದುಕೆಗಳನ್ನು ತನ್ನ ಪ್ರತಿನಿಧಿಯಾಗಿ ಭತನಿಗೆ ಕೊಟ್ಟು ಬಹುವಿಧದಿಂದ ಅವನಿಗೆ ಸಮಾಧಾನ ಹೇಳಿ ಭರತನನ್ನು ಹಿಂದಕ್ಕೆ ಕಳುಹಿಸಿದನು.

★

ಭರತನ ಇಷ್ಟವು ನಡೆಯಲಿಲ್ಲ. ಅವನು ಶ್ರೀರಾಮನ ಪಾದಗಳನ್ನು ಮುಟ್ಟಿ ನಮಸ್ಕರಿಸಿ, ಹಿಂದಿರುಗಿ ಬಂದು ನಂದಿಗ್ರಾಮದಲ್ಲಿಯೇ ನಿಂತನು. ಅಲ್ಲಿಯೇ ಶ್ರೀರಾಮನ ಆಗಮನವು ಯಾವಾಗ ಆದೀತೆಂದು ಅದನ್ನೇ ನಿರೀಕ್ಷಿಸುತ್ತ ರಾಜ್ಯಭಾರವನ್ನು ಮಾಡುತ್ತಿದ್ದನು.

★

ಭರತನು ಹೋದ ಮೇಲೆ ಸತ್ಯಸಂಧನೂ, ಜಿತೇಂದ್ರಿಯನೂ ಆದ ಶ್ರೀರಾಮನು ಅಯೋಧ್ಯಾವಾಸಿ ಪೌರರು ತಾನಿದ್ದ ಸ್ಥಳಕ್ಕೆ ಬರತೊಡಗುವರೆಂದು ಶಂಕಿಸಿ, ಒಂದೇ ಮನಸ್ಸಿನಿಂದ ನಿಶ್ಚಯಿಸಿ ದಂಡಕಾರಣ್ಯದೊಳಗೆ ಪ್ರವೇಶಿಸಿದನು.

★

ಪ್ರವಿಶ್ಯ ತು ಮಹಾರಣ್ಯಂ ರಾಮೋ ರಾಜೀವಲೋಚನಃ।
ವಿರಾಧಂ ರಾಕ್ಷಸಂ ಹತ್ವಾ ಶರಭಂಗಂ ದದರ್ಶ ಹ॥41॥

ಸುತೀಕ್ಷ್ಣಂ ಚಾಪ್ಯಗಸ್ತ್ಯಂ ಚ ಅಗಸ್ತ್ಯಭ್ರಾತರಂ ತಥಾ।
ಅಗಸ್ತ್ಯವಚನಾಚ್ಚೈವ ಜಗ್ರಾಹೈಂದ್ರಂ ಶರಾಸನಮ್॥42॥

ಖಡ್ಗಂ ಚ ಪರಮಪ್ರೀತಸ್ತೂಣೀ ಚಾಕ್ಷಯಸಾಯಕೌ।
ವಸತಸ್ತಸ್ಯ ರಾಮಸ್ಯ ವನೇ ವನಚರೈಃ ಸಹ॥ 43॥

★

ಋಷಯೋಽಭ್ಯಾಗಮನ್ ಸರ್ವೇ ವಧಾಯಾಸುರರಕ್ಷಸಾಮ್।
ಸ ತೇಷಾಂ ಪ್ರತಿಶುಶ್ರಾವ ರಾಕ್ಷಸಾನಾಂ ತಥಾ ವನೇ॥ 44॥

★

ಪ್ರತಿಜ್ಞಾತಶ್ಚ ರಾಮೇಣ ವಧಃ ಸಂಯತಿ ರಕ್ಷಸಾಮ್।
ಋಷೀಣಾಮಗ್ನಿಕಲ್ಪಾನಾಂ ದಂಡಕಾರಣ್ಯವಾಸಿನಾಮ್॥45॥

★

ತೇನ ತತ್ರೈವ ವಸತಾ ಜನಸ್ಥಾನನಿವಾಸಿನೀ।
ವಿರೂಪಿತಾ ಶೂರ್ಪಣಖಾ ರಾಕ್ಷಸೀ ಕಾಮರೂಪಿಣೀ॥46॥

★

ಕಮಲನೇತ್ರನಾದ ರಾಮನು ಸೀತಾಲಕ್ಷ್ಮಣರೊಡನೆ ಆ ಗೊಂಡಾರಣ್ಯವನ್ನು ಹೊಕ್ಕಮೇಲೆ ವಿರಾಧನೆಂಬ ರಾಕ್ಷಸನನ್ನು ಸಂಹರಿಸಿ ಶರಭಂಗಮುನಿಗಳನ್ನು ಸಂದರ್ಶಿಸಿದನು. ಹಾಗೆಯೇ ಸುತೀಕ್ಷ್ಣಮುನಿಗಳನ್ನು ಕಂಡು ಅಗಸ್ತ್ಯ ಮಹರ್ಷಿಗಳನ್ನೂ, ಅವರ ಸೋದರನನ್ನೂ ಕಂಡನು. ಶ್ರೀರಾಮನು ಅಗಸ್ತ್ಯಮುನಿಗಳ ಅಪ್ಪಣೆಯಂತೆ ಅವರು ಕೊಟ್ಟ ಐಂದ್ರಧನುಸ್ಸನ್ನೂ, ಖಡ್ಗವನ್ನೂ, ಅಕ್ಷಯಾಸ್ತ್ರಗಳಿರುವ ಎರಡು ಬತ್ತಳಿಕೆಗಳನ್ನೂ ಸ್ವೀಕರಿಸಿದನು. ಆ ಆಯುಧಗಳು ದೊರೆತವೆಂದು ಆತನಿಗೆ ಬಹಳ ಸಂತೋಷವಾಯಿತು.

★

ಅನಂತರ ಶ್ರೀರಾಮನು ಆ ದಂಡಕಾರಣ್ಯದಲ್ಲಿ ವನಚರರ ನಡುವೆ ವಾಸಮಾಡುತ್ತಿರುವಾಗ, ಆತನಿಂದ ಅಸುರರನ್ನೂ, ರಾಕ್ಷಸರನ್ನೂ ಕೊಲ್ಲಿಸುವ ಉದ್ದೇಶದಿಂದ ಅನೇಕ ಋಷಿಗಳು ಅವನ ಬಳಿಗೆ ಬಂದರು. ರಾಘವನು ರಾಕ್ಷಸರಿಂದಾಗುವ ಹಾವಳಿಯನ್ನು ಅವರ ಮುಖದಿಂದ ಕೇಳಿದನು.

★

ಆ ಋಷಿಗಳಿಗಾಗುವ ಕಷ್ಟವನ್ನು ಕೇಳಿ ಶ್ರೀರಾಮನು ಆ ರಾಕ್ಷಸರೊಡನೆ ಯುದ್ಧಮಾಡಿ ಅವರೆಲ್ಲರನ್ನೂ ವಧಿಸುತ್ತೇನೆಂದು ಮಾತುಕೊಟ್ಟನು. ದಂಡಕಾರಣ್ಯವಾಸಿಗಳೂ, ಅಗ್ನಿಯಂತೆ ತೇಜಸ್ವಿಗಳೂ ಆದ ಋಷಿಗಳ ಕಷ್ಟವನ್ನು ಪರಿಹರಿಸುತ್ತೇನೆಂದು ಪ್ರತಿಜ್ಞೆಮಾಡಿದನು.

★

ಹೀಗೆ ದಂಡಕಾರಣ್ಯದಲ್ಲಿರುವಾಗಲೇ ಜನಸ್ಥಾನನಿವಾಸಿನಿಯೂ, ಕಾಮರೂಪಿಣಿಯೂ ಆದ ಶೂರ್ಪಣಖೆಯೆಂಬ ರಾಕ್ಷಸಿಯ ಪೀಡೆಯನ್ನು ತಪ್ಪಿಸಿಕೊಳ್ಳುವುದಕ್ಕಾಗಿ ಅವಳನ್ನು ವಿರೂಪಗೊಳಿಸಬೇಕಾಯಿತು.
(ಆಕೆಯ ಕಿವಿ ಮೂಗುಗಳನ್ನು ಕತ್ತರಿಸಿದನು.)

★

ತತಃ ಶೂರ್ಪಣಖಾವಾಕ್ಯಾದುದ್ಯುಕ್ತಾನ್ ಸರ್ವರಾಕ್ಷಸಾನ್।
ಖರಂ ತ್ರಿಶಿರಸಂ ಚೈವ ದೂಷಣಂ ಚೈವ ರಾಕ್ಷಸಮ್॥ 47॥

ನಿಜಘಾನ ರಣೇ ರಾಮಸ್ತೇಷಾಂ ಚೈವ ಪದಾನುಗಾನ್।
ವನೇ ತಸ್ಮಿನ್ ನಿವಸತಾ ಜನಸ್ಥಾನನಿವಾಸಿನಾಮ್॥ 48 ॥

★

ರಕ್ಷಸಾಂ ನಿಹತಾನ್ಯಾಸನ್ ಸಹಸ್ರಾಣಿ ಚತುರ್ದಶ।
ತತೋ ಜ್ಞಾತಿವಧಂ ಶ್ರುತ್ವಾ ರಾವಣಃ ಕ್ರೋಧಮೂರ್ಛಿತಃ॥ 49 ॥

★

ಸಹಾಯಂ ವರಯಾಮಾಸ ಮಾರೀಚಂ ನಾಮ ರಾಕ್ಷಸಮ್।
ವಾರ್ಯಮಾಣಃ ಸುಬಹುಶೋ ಮಾರೀಚೇನ ಸ ರಾವಣಃ॥ 50॥

ನ ವಿರೋಧೋ ಬಲವತಾ ಕ್ಷಮೋ ರಾವಣ ತೇನ ತೇ।
ಅನಾದೃತ್ಯ ತು ತದ್ವಾಕ್ಯಂ ರಾವಣಃ ಕಾಲಚೋದಿತಃ॥ 51॥

★

ಜಗಾಮ ಸಹಮಾರೀಚಸ್ತಸ್ಯಾಶ್ರಮಪದಂ ತದಾ।
ತೇನ ಮಾಯಾವಿನಾ ದೂರಮಪವಾಹ್ಯ ನೃಪಾತ್ಮಜೌ॥ 52॥

★

ಆಮೇಲೆ ಶೂರ್ಪಣಖಿಯು ಜನಸ್ಥಾನಕ್ಕೆ ಹೋಗಿ ಹೇಳಿದ ದೂರನ್ನು ಕೇಳಿ ಖರ, ತ್ರಿಶಿರ, ದೂಷಣ ಇವರ ನೇತೃತ್ವದಲ್ಲಿ ಬಂದ ಸಮಸ್ತ ರಾಕ್ಷಸರನ್ನೂ ಶ್ರೀರಾಮನೊಬ್ಬನೇ ಯುದ್ಧ ಮಾಡಿ ಕೊಂದು ಹಾಕಿದನು.

★

ಹತರಾದ ಆ ರಾಕ್ಷಸರ ಸಂಖ್ಯೆ ಹದಿನಾಲ್ಕು ಸಾವಿರ. ತನಗೆ ಬಂಧುಗಳಾಗಿದ್ದ ಆ ರಾಕ್ಷಸರು ಶ್ರೀರಾಮನಿಂದ ಹತರಾದರೆಂಬ ವಾರ್ತೆಯನ್ನು ಕೇಳಿ ರಾವಣನು ಕೋಪದಿಂದ ಕೆಂಡವಾದನು.

★

ಅದಕ್ಕೆ ಪ್ರತೀಕಾರವನ್ನು ಮಾಡಲೇಬೇಕೆಂದು ನಿಶ್ಚಯಿಸಿದ ರಾವಣನು ಮಾರೀಚನೆಂಬ ರಾಕ್ಷಸನ ಬಳಿಗೆ ಹೋಗಿ ತನಗೆ ಸಹಾಯಮಾಡಬೇಕೆಂದು ಅವನನ್ನು ಕೇಳಿಕೊಂಡನು. ಸಂದರ್ಭವೇನೆಂಬುದನ್ನು ಕೇಳಿ ತಿಳಿದ ಮಾರೀಚನು ''ರಾವಣ, ಈ ಸಾಹಸಕೃತ್ಯವು ನಿನಗೆ ಬೇಡ. ರಾಮನು ಅತ್ಯಂತ ಬಲಶಾಲಿ, ಪರಾಕ್ರಮಿ. ಅಂತಹ ಅಧಿಕಬಲನಾದ ರಾಮನೊಡನೆ ವಿರೋಧವು ನಿನಗೆ ಸಲ್ಲದು'' ಎಂದು ಪರಿಪರಿಯಾಗಿ ಹೇಳಿ ತಡೆಯಲು ಯತ್ನಿಸಿದರೂ ರಾವಣನು ಅವನ ಮಾತನ್ನು ಕೇಳಲೇ ಇಲ್ಲ. ಕಾಲಗತಿಯು ರಾವಣನನ್ನು ಪ್ರೇರಿಸುತ್ತಿತ್ತು.

★

ಅವನು ಮಾರೀಚನ ಹಿತೋಪದೇಶವನ್ನು ಧಿಕ್ಕರಿಸಿ ಆತನನ್ನು ಒತ್ತಾಯದಿಂದ ಜೊತೆಯಲ್ಲಿ ಕರೆದುಕೊಂಡು ಶ್ರೀರಾಮನ ಆಶ್ರಮದ ಬಳಿಗೆ ಬಂದನು. ಮಾಯಾವಿಯಾದ ಮಾರೀಚನ ಮೂಲಕ ರಾಮಲಕ್ಷ್ಮಣರು ಪರ್ಣಶಾಲೆಯಿಂದ ದೂರಹೋಗುವಂತೆ ಮಾಡಿಸಿದನು. ಆಮೇಲೆ ವಂಚನೆಯಿಂದ ಶ್ರೀರಾಮಪತ್ನಿ ಸೀತಾದೇವಿಯನ್ನು ರಾವಣನು ಅಪಹರಿಸಿದನು.

★

ಜಹಾರ ಭಾರ್ಯಾಂ ರಾಮಸ್ಯ ಗೃಧ್ರಂ ಹತ್ವಾ ಜಟಾಯುಷಮ್।
ಗೃಧ್ರಂ ಚ ನಿಹತಂ ದೃಷ್ಟ್ವಾ ಹೃತಾಂ ಶ್ರುತ್ವಾ ಚ ಮೈಥಿಲೀಮ್॥ 53॥

ರಾಘವಃ ಶೋಕಸಂತಪ್ತೋ ವಿಲಲಾಪಾಕುಲೇಂದ್ರಿಯಃ।
ತತಸ್ತೇನೈವ ಶೋಕೇನ ಗೃಧ್ರಂ ದಗ್ಧ್ವಾ ಜಟಾಯುಷಮ್॥ 54॥

★

ಮಾರ್ಗಮಾಣೋ ವನೇ ಸೀತಾಂ ರಾಕ್ಷಸಂ ಸಂದದರ್ಶ ಹ।
ಕಬಂಧಂ ನಾಮರೂಪೇಣ ವಿಕೃತಂ ಘೋರದರ್ಶನಮ್॥ 55॥

ತಂ ನಿಹತ್ಯ ಮಹಾಬಾಹುರ್ದದಾಹ ಸ್ವರ್ಗತಶ್ಚ ಸಃ।
ತ ಚಾಪಿ ಕಥಯಾಮಾಸ ಶಬರೀಂ ಧರ್ಮಚಾರಿಣೀಮ್॥56॥

★

ಶ್ರಮಣೀಂ ಧರ್ಮನಿಪುಣಾಮಭಿಗಚ್ಛೇತಿ ರಾಘವಮ್।
ಸೋಽಭ್ಯಗಚ್ಛನ್ಮಹಾತೇಜಾಃ ಶಬರೀಂ ಶತ್ರುಸೂದನಃ॥ 57॥

★

ಶಬರ್ಯಾ ಪೂಜಿತಃ ಸಮ್ಯಗ್ರಾಮೋ ದಶರಥಾತ್ಮಜಃ।
ಪಂಪಾತೀರೇ ಹನುಮತಾ ಸಂಗತೋ ವಾನರೇಣ ಹ॥ 58 ॥

★

ದಾರಿಯಲ್ಲಿ ಅಡ್ಡಬಂದ ಜಟಾಯುವೆಂಬ ಗೃಧ್ರರಾಜನನ್ನು ಸಾಯುವಂತೆ ಬಡಿದು ರಾವಣನು ಹೊರಟು ಹೋದನು. ಇತ್ತ ಶ್ರೀರಾಮನು ಸೀತೆಯನ್ನು ಹುಡುಕುತ್ತ ಬಂದು ಮೃತಪ್ರಾಯನಾದ ಜಟಾಯುವನ್ನು ಕಂಡು, ರಾವಣನು ಮೈಥಿಲಿಯನ್ನು ಅಪಹರಿಸಿದ ವೃತ್ತಾಂತವನ್ನು ಆತನಿಂದ ಕೇಳಿ ತಿಳಿದನು. ಆಗ ರಾಘವನು ಶೋಕಸಂತಪ್ತನಾಗಿ ಮನಸ್ಸನ್ನು ಬಿಗಿ ಹಿಡಿಯಲಾರದೆ ಗಳಗಳನೆ ಅಳತೊಡಗಿದನು. ಅನಂತರ ಪ್ರಾಣವನ್ನು ಬಿಟ್ಟ ಜಟಾಯುವನ್ನು ಅಳುತ್ತಲೇ ದಹಿಸಿದನು.

★

ಹಾಗೆಯೇ ಸೀತಾದೇವಿಯ ಸುಳಿವನ್ನು ತಿಳಿಯುವುದಕ್ಕಾಗಿ ಕಾಡಿನಲ್ಲಿ ಹೋಗುತ್ತಿರಲು ಕಬಂಧನೆಂಬ ರಾಕ್ಷಸನು ಎದುರಾದನು. ನೋಡಲು ಭಯಂಕರನಾಗಿದ್ದ ಆ ರಾಕ್ಷಸನು ಬಹಳ ಕುರೂಪಿಯಾಗಿದ್ದನು. ರಾಮನು ಅವನನ್ನು ವಧಿಸಿ ಅಗ್ನಿಯಲ್ಲಿ ದಹಿಸಲಾಗಿ ಆ ರಾಕ್ಷಸನು ಒಬ್ಬ ಗಂಧರ್ವನಾಗಿ ಸ್ವರ್ಗಕ್ಕೆ ತೆರಳಿದನು.

★

ಆ ಗಂಧರ್ವನು ಸ್ವರ್ಗಕ್ಕೆ ಹೋಗುವಾಗ ರಾಘವನನ್ನು ಕುರಿತು- ''ಶ್ರೀರಾಮ, (ಮುಂದೆ ಸ್ವಲ್ಪದೂರದಲ್ಲಿ) ಶಬರಿಯೆಂಬ ಒಬ್ಬ ಧರ್ಮಚಾರಿಣಿ ಇದ್ದಾಳೆ. ಆ ತಾಪಸಿಯ ಬಳಿಗೆ ಹೋಗು'' ಎಂದನು. ಅಂತೆಯೇ ಶ್ರೀರಾಮನು (ಲಕ್ಷ್ಮಣಸಹಿತನಾಗಿ) ಶಬರಿಯಿದ್ದ ಸ್ಥಳಕ್ಕೆ ಹೋದನು.

★

ಶತ್ರುಸೂದನನೂ, ಮಹಾತೇಜಸ್ವಿಯೂ ಆದ ಶ್ರೀರಾಮನನ್ನು ಶಬರಿಯು ಸ್ವಾಗತಿಸಿ ಭಕ್ತಿಯಿಂದ ಪೂಜಿಸಿ ಉಪಚರಿಸಿದಳು. ಆಮೇಲೆ ದಶರಥಾತ್ಮಜನು (ಲಕ್ಷ್ಮಣನೊಡನೆ) ಪಂಪಾಸರಸ್ಸಿನ ಬಳಿಗೆ ಹೋದನು. ಅದರ ತೀರದಲ್ಲಿ ವಾನರನಾದ ಹನುಮಂತನ ಭೇಟಿಯಾಯಿತು.

★

ಹನೂಮದ್ವಚನಾಚ್ಚೈವ ಸುಗ್ರೀವೇಣ ಸಮಾಗತಃ।
ಸುಗ್ರೀವಾಯ ಚ ತತ್ಸರ್ವಂ ಶಂಸದ್ರಾಮೋ ಮಹಾಬಲಃ॥ 59 ॥

★

ಆದಿತಸ್ತದ್ಯಥಾವೃತ್ತಂ ಸೀತಾಯಾಶ್ಚ ವಿಶೇಷತಃ।
ಸುಗ್ರೀವಶ್ಚಾಪಿ ತತ್ಸರ್ವಂ ಶ್ರುತ್ವಾ ರಾಮಸ್ಯ ವಾನರಃ॥ 60॥

ಚಕಾರ ಸಖ್ಯಂ ರಾಮೇಣ ಪ್ರೀತಶ್ಚೈವಾಗ್ನಿಸಾಕ್ಷಿಕಮ್।
ತತೋ ವಾನರರಾಜೇನ ವೈರಾನುಕಥನಂ ಪ್ರತಿ॥ 61॥

ರಾಮಾಯಾವೇದಿತಂ ಸರ್ವಂ ಪ್ರಣಯಾದ್ದುಃಖಿತೇನ ಚ।
ಪ್ರತಿಜ್ಞಾತಂ ಚ ರಾಮೇಣ ತದಾ ವಾಲಿವಧಂ ಪ್ರತಿ॥ 62॥

★

ವಾಲಿನಶ್ಚ ಬಲಂ ತತ್ರ ಕಥಯಾಮಾಸ ವಾನರಃ।
ಸುಗ್ರೀವಃ ಶಂಕಿತಶ್ಚಾಸೀನ್ನಿತ್ಯಂ ವೀರ್ಯೇಣ ರಾಘವೇ॥ 63॥

ರಾಘವಪ್ರತ್ಯಯಾರ್ಥಂ ತು ದುಂದುಭೇಃ ಕಾಯಮುತ್ತಮಮ್।
ದರ್ಶಯಾಮಾಸ ಸುಗ್ರೀವೋ ಮಹಾಪರ್ವತಸಂನಿಭಮ್॥ 64॥

★

ಉತ್ಸ್ಮಯಿತ್ವಾ ಮಹಾಬಾಹುಃ ಪ್ರೇಕ್ಷ್ಯ ಚಾಸ್ಥಿ ಮಹಾಬಲಃ।
ಪಾದಾಂಗುಷ್ಠೇನ ಚಿಕ್ಷೇಪ ಸಂಪೂರ್ಣಂ ದಶಯೋಜನಮ್॥ 65 ॥

★

ಹನುಮಂತನ ವಚನವನ್ನಾಲಿಸಿ ಅದರಂತೆ ಬಲಾಢ್ಯನಾದ ಶ್ರೀರಾಮನು ಸುಗ್ರೀವನ ಬಳಿಗೆ ಹೋಗಿ, ಅವನನ್ನು ಕಂಡು ತನ್ನ ವೃತ್ತಾಂತವನ್ನು ಪೂರ್ತಿಯಾಗಿ ವಿಶೇಷವಾಗಿ ಸೀತಾಪಹರಣದ ವಿಷಯವನ್ನು ವಿವರಿಸಿದನು.

★

ವಾನರನಾದ ಸುಗ್ರೀವನು ರಾಮನ ವೃತ್ತಾಂತವೆಲ್ಲವನ್ನು ಕೇಳಿದ ಮೇಲೆ ಅವನೊಡನೆ ಸಂತೋಷದಿಂದ ಅಗ್ನಿಸಾಕ್ಷಿಕವಾಗಿ ಸ್ನೇಹವನ್ನು ಮಾಡಿಕೊಂಡನು. ಅನಂತರ ಸುಗ್ರೀವನು (ತನ್ನ ಸುದ್ದಿಯನ್ನು ಸ್ಮರಿಸಿಕೊಂಡು) ಶೋಕಸಂತಪ್ತನಾಗಿ ವಾನರ ರಾಜನಾದ ವಾಲಿಯೊಡನೆ ಸಂಭವಿಸಿದ ವೈರ ವೃತ್ತಾಂತವನ್ನು ಶ್ರೀರಾಮನಿಗೆ ಸ್ನೇಹ ನಿಮಿತ್ತದಿಂದ ಹೇಳಿಕೊಂಡನು. ಆಗ ಶ್ರೀರಾಮನು ''ಸುಗ್ರೀವ, ನಾನು ವಾಲಿಯನ್ನು ಕೊಂದು ಹಾಕುವೆನು'' ಎಂದು ಪ್ರತಿಜ್ಞೆಮಾಡಿದನು.

★

ಸುಗ್ರೀವನು ವಾಲಿಯ ಬಲಸಂಪತ್ತನ್ನು ವರ್ಣಿಸಿದನು. ಅವನಿಗೆ ಶ್ರೀರಾಮನ ಪರಾಕ್ರಮದ ವಿಷಯದಲ್ಲಿ ಬಲವಾದ ಶಂಕೆಯಿತ್ತು. ಆ ಸುಗ್ರೀವನು ವಾಲಿಯ ಪರಾಕ್ರಮಕ್ಕೆ ನಿದರ್ಶನವಾಗಿ ಮಹಾಪರ್ವತಾಕಾರವಾಗಿದ್ದ ದುಂದುಭಿಯ ಕಳೇಬರವನ್ನು ತೋರಿಸಿದನು.

★

ಆಗ ಮಹಾಪರಾಕ್ರಮಿಯೂ, ಆಜಾನುಬಾಹುವೂ ಆದ ಶ್ರೀರಾಮನು ದುಂದುಭಿಯ ಅಸ್ಥಿಪಂಜರವನ್ನು ನೋಡಿ ಅಸಡ್ಡೆಯಿಂದ ನಕ್ಕು, ಕಾಲಿನ ಹೆಬ್ಬೆರಳಿನಿಂದ ಚಿಮ್ಮಿದನು. ಅಸ್ಥಿಪಂಜರವು ಹತ್ತುಯೋಜನದಷ್ಟು ದೂರ ಹೋಗಿ ಬಿದ್ದಿತು.

★

ಬಿಭೇದ ಚ ಪುನಃ ಸಾಲಾನ್ ಸಪ್ತೈಕೇನ ಮಹೇಷುಣಾ।
ಗಿರಿಂ ರಸಾತಲಂ ಚೈವ ಜನಯನ್ ಪ್ರತ್ಯಯಂ ತದಾ॥ 66 ॥

★

ತತಃ ಪ್ರೀತಮನಾಸ್ತೇನ ವಿಶ್ವಸ್ತಃ ಸ ಮಹಾಕಪಿಃ।
ಕಿಷ್ಕಿಂಧಾಂ ರಾಮಸಹಿತೋ ಜಗಾಮ ಚ ಗುಹಾಂ ಸದಾ॥ 67॥

ತತೋಽಗರ್ಜದ್ಧರಿವರಃ ಸುಗ್ರೀವೋ ಹೇಮಪಿಂಗಲಃ।
ತೇನ ನಾದೇನ ಮಹತಾ ನಿರ್ಜಗಾಮ ಹರೀಶ್ವರಃ॥ 68॥

★

ಅನುಮಾನ್ಯ ತದಾ ತಾರಾಂ ಸುಗ್ರೀವೇಣ ಸಮಾಗತಃ।
ನಿಜಘಾನ ಚ ತತ್ರೈನಂ ಶರೇಣೈಕೇನ ರಾಘವಃ॥ 69॥

★

ತತಃ ಸುಗ್ರೀವವಚನಾದ್ಧತ್ವಾ ವಾಲಿನಮಾಹವೇ।
ಸುಗ್ರೀವಮೇವ ತದ್ರಾಜ್ಯೇ ರಾಘವಃ ಪ್ರತ್ಯಪಾದಯತ್॥ 70॥

★

ಸ ಚ ಸರ್ವಾನ್ ಸಮಾನೀಯ ವಾನರಾನ್ ವಾನರರ್ಷಭಃ।
ದಿಶಃ ಪ್ರಸ್ಥಾಪಯಾಮಾಸ ದಿದೃಕ್ಷುರ್ಜನಕಾತ್ಮಜಾಮ್॥ 71 ॥

★

ಮತ್ತೆ ಶ್ರೀರಾಮನು ಪ್ರಯೋಗಿಸಿದ ಒಂದು ಮಹಾಸ್ತ್ರವು ಏಳು ಸಾಲವೃಕ್ಷಗಳನ್ನು ಕತ್ತರಿಸಿ ಮುಂದಿದ್ದ ಒಂದು ಬೆಟ್ಟವನ್ನು ಕೊರೆದು ನುಗ್ಗಿ ರಸಾತಳಕ್ಕೆ ಹೋಗಿ ಸೇರಿತು. ಅದನ್ನು ಕಂಡು ಸುಗ್ರೀವನಿಗೆ ಶ್ರೀರಾಮನ ಶಕ್ತಿಸಾಮರ್ಥ್ಯಗಳಲ್ಲಿ ನಂಬಿಕೆ ಮೂಡಿತು.(66)

★

ಆಗ ರಾಘವನ ಪರಾಕ್ರಮದಲ್ಲಿ ಪೂರ್ಣವಾದ ನಂಬಿಕೆಯನ್ನು ತಳೆದು ಸಂತುಷ್ಟನಾಗಿ ಮಹಾವಾನರನಾದ ಸುಗ್ರೀವನು ಶ್ರೀರಾಮನನ್ನು ಕರೆದುಕೊಂಡು ಗುಹಾಸದೃಶವಾದ ಕಿಷ್ಕಿಂಧೆಯ ಬಳಿಗೆ ಹೋದನು. ಅಲ್ಲಿ ಹೊಳೆಯುವ ಹೊಂಬಣ್ಣದಿಂದ ವಿರಾಜಿಸುತ್ತಿದ್ದ ವಾನರೋತ್ತಮನಾದ ಸುಗ್ರೀವನು ಗಟ್ಟಿಯಾಗಿ ಗರ್ಜಿಸಿದನು. ಮಹತ್ತರವಾದ ಆ ಸಿಂಹನಾದವನ್ನು ಕೇಳಿ ಕಪಿರಾಜನಾದ ವಾಲಿಯು ಹೊರಕ್ಕೆ ಬಂದನು.(67,68)

★

ವಾಲಿಯು ತನ್ನ ಮಡದಿ ತಾರೆಗೆ ಸಮಾಧಾನ ಹೇಳಿ ಬಂದಿದ್ದನು. ಆತನು ಸುಗ್ರೀವನನ್ನು ಎದುರಿಸಿ ಹೋರಾಟವನ್ನು ನಡೆಸುತ್ತಿರುವಾಗ ಶ್ರೀರಾಮನು ಒಂದು ಬಾಣವನ್ನು ಪ್ರಯೋಗಿಸಿ ವಾಲಿಯನ್ನು ವಧಿಸಿದನು. (69)

★

ಹೀಗೆ ಸುಗ್ರೀವನಿಗೆ ಕೊಟ್ಟ ಮಾತಿನಂತೆ ವಾಲಿಯನ್ನು ಯುದ್ಧಸಮಯದಲ್ಲಿ ವಧಿಸಿ ಶ್ರೀರಾಮನು ಸುಗ್ರೀವನನ್ನೇ ಆ ಕಿಷ್ಕಿಂಧಾರಾಜ್ಯದಲ್ಲಿ ರಾಜನೆಂದು ಸ್ಥಾಪಿಸಿದನು.(70)

★

ಅನಂತರ ವಾನರೋತ್ತಮನಾದ ಸುಗ್ರೀವನು ಸಮಸ್ತ ವಾನರರನ್ನು ಕರೆಸಿ ಜನಕಾತ್ಮಜೆಯಾದ ಸೀತಾದೇವಿಯು ಎಲ್ಲಿರುವಳೆಂದು ತಿಳಿಯುವುದಕ್ಕಾಗಿ ನಾನಾ ದಿಕ್ಕುಗಳಿಗೆ ಕಳಿಸಿದನು. (71)

★

ತತೋ ಗೃಧ್ರಸ್ಯ ವಚನಾತ್ ಸಂಪಾತೇರ್ಹನುಮಾನ್ ಬಲೀ।
ಶತಯೋಜನವಿಸ್ತೀರ್ಣಂ ಪುಪ್ಲುವೇ ಲವಣಾರ್ಣವಮ್॥ 72 ॥

★

ತತ್ರ ಲಂಕಾಂ ಸಮಾಸಾದ್ಯ ಪುರೀಂ ರಾವಣಪಾಲಿತಾಮ್।
ದದರ್ಶ ಸೀತಾಂ ಧ್ಯಾಯಂತೀಮಶೋಕವನಿಕಾಂ ಗತಾಮ್॥ 73 ॥

★

ನಿವೇದಯಿತ್ವಾಭಿಜ್ಞಾನಂ ಪ್ರವೃತ್ತಿಂ ಚ ನಿವೇದ್ಯ ಚ।
ಸಮಾಶ್ವಾಸ್ಯ ಚ ವೈದೇಹೀಂ ಮರ್ದಯಾಮಾಸ ತೋರಣಮ್॥ 74 ॥

★

ಪಂಚ ಸೇನಾಗ್ರಗಾನ್ ಹತ್ವಾ ಸಪ್ತ ಮಂತ್ರಿಸುತಾನಪಿ।
ಶೂರಮಕ್ಷಂ ಚ ನಿಷ್ಪಿಷ್ಯ ಗ್ರಹಣಂ ಸಮುಪಾಗಮತ್॥ 75 ॥

★

ಅಸ್ತ್ರೇಣೋನ್ಮುಕ್ತಮಾತ್ಮಾನಂ ಜ್ಞಾತ್ವಾ ಪೈತಾಮಹಾದ್ವರಾತ್।
ಮರ್ಷಯನ್ ರಾಕ್ಷಸಾನ್ ವೀರೋ ಯಂತ್ರಿಣಸ್ತಾನ್ ಯದೃಚ್ಛಯಾ॥ 76 ॥

★

ಅನಂತರ ಸೀತಾನ್ವೇಷಣೆಗಾಗಿ ಹೊರಟ ಕಪಿಗಳಲ್ಲಿ ಬಲಿಷ್ಠನಾದ ಹನುಮಂತನು ದೇವಿಯನ್ನು ಅನ್ವೇಷಿಸುತ್ತ ಹೋಗಿ, ಸಂಪಾತಿಯೆಂಬ ಗೃಧ್ರರಾಜನ ವಚನದಂತೆ ಅವಳು ಲಂಕೆಯಲ್ಲಿರುವುದೆಂಬುದನ್ನರಿತು, ನೂರು ಯೋಜನದಷ್ಟು ವಿಸ್ತಾರವಾದ ಸಮುದ್ರವನ್ನು ಹಾರಿ ದಾಟಿದನು.

★

ಹನುಮಂತನು ಆ ಮಹಾಸಾಗರದ ಆಚೆಯ ತೀರದಲ್ಲಿದ್ದ ಲಂಕಾನಗರಕ್ಕೆ ಹೋದನು. ಅದು ರಾವಣನಿಂದ ರಕ್ಷಿತವಾದ ನಗರಿ. ಅಲ್ಲಿ ಸೀತಾದೇವಿಯನ್ನು ಅನ್ವೇಷಿಸುತ್ತ ಕಡೆಗೆ ಅಶೋಕವನಕ್ಕೆ ಹೋಗಿ ಶ್ರೀರಾಮನನ್ನೇ ಧ್ಯಾನಿಸುತ್ತಿದ್ದ ಸೀತಾದೇವಿಯನ್ನು ಕಂಡನು.

★

ಹನುಮಂತನು ಸೀತಾದೇವಿಯ ಹತ್ತಿರ ಹೋಗಿ ಶ್ರೀರಾಮನ ವೃತ್ತಾಂತವನ್ನು ನಿವೇದಿಸಿ, ತನ್ನ ಗುರುತಾಗಿ ಶ್ರೀರಾಮನು ಕೊಟ್ಟಿದ್ದ ಉಂಗುರವನ್ನು ಕೊಟ್ಟನು. ಆಮೇಲೇ ದೇವಿಯನ್ನು ಹುಡುಕುವುದಕ್ಕಾಗಿ ಪ್ರಯತ್ನಿಸುತ್ತಿದ್ದ ಶ್ರೀರಾಮನ ಕಾರ್ಯಪ್ರವೃತ್ತಿಯನ್ನು ಅವಳಿಗೆ ಹೇಳಿ ಸಮಾಧಾನಪಡಿಸಿದನು. ಆಮೇಲೆ ಅಶೋಕವನದ ಬಹಿರ್ದ್ವಾರವನ್ನು ಮುರಿದು ಹಾಕಿದನು.

★

ಇದನ್ನರಿತು ಯುದ್ಧಕ್ಕೆ ಬಂದ ಐವರು ಸೇನಾಪತಿಗಳನ್ನೂ, ರಾವಣನ ಏಳು ಮಂತ್ರಿಪುತ್ರರನ್ನೂ ಹನುಮಂತನು ಕೊಂದು ಹಾಕಿದನು. ಆಮೇಲೆ ಹನುಮಂತನು ರಾವಣಪುತ್ರನೂ, ಶೂರನೂ ಆದ ಅಕ್ಷಕುಮಾರನನ್ನು ಬಡಿದು ಕೊಂದು, ಕಡೆಯಲ್ಲಿ ಇಂದ್ರಜಿತುವಿನ ಬ್ರಹ್ಮಾಸ್ತ್ರಕ್ಕೆ ಸೆರೆಯಾದನು.

★

ವೀರನಾದ ಆಂಜನೇಯನು ಬ್ರಹ್ಮನ ವರಬಲದಿಂದ ತಾನು ಬ್ರಹ್ಮಾಸ್ತ್ರದಿಂದ ಬಿಡುಗಡೆ ಹೊಂದಿರುವುದನ್ನು ತಿಳಿದಿದ್ದರೂ ತನ್ನನ್ನು ಎಳೆದೊಯ್ಯುತ್ತಿದ್ದ ರಾಕ್ಷಸರನ್ನು ಕೊಲ್ಲದೆ ತಾಳ್ಮೆಯಿಂದ ಇದ್ದನು.

★

ತತೋ ದಗ್ಧ್ವಾ ಪುರೀಂ ಲಂಕಾಮೃತೇ ಸೀತಾಂ ಚ ಮೈಥಿಲೀಮ್।
ರಾಮಾಯ ಪ್ರಿಯಮಾಖ್ಯಾತುಂ ಪುನರಾಯಾನ್ಮಹಾಕಪಿಃ॥ 77 ॥

★

ಸೋಽಭಿಗಮ್ಯ ಮಹಾತ್ಮಾನಂ ಕೃತ್ವಾ ರಾಮಂ ಪ್ರದಕ್ಷಿಣಮ್।
ನ್ಯವೇದಯದಮೇಯಾತ್ಮಾ ದೃಷ್ಟಾ ಸೀತೇತಿ ತತ್ತ್ವತಃ॥ 78॥

★

ತತಃ ಸುಗ್ರೀವಸಹಿತೋ ಗತ್ವಾ ತೀರಂ ಮಹೋದಧೇಃ।
ಸಮುದ್ರಂ ಕ್ಷೋಭಯಾಮಾಸ ಶರೈರಾದಿತ್ಯಸಂನಿಭೈಃ॥ 79॥

★

ದರ್ಶಯಾಮಾಸ ಚಾತ್ಮಾನಂ ಸಮುದ್ರಃ ಸರಿತಾಂ ಪತಿಃ।
ಸಮುದ್ರವಚನಾಚ್ಚೈವ ನಲಂ ಸೇತುಮಕಾರಯತ್॥ 80 ॥

★

ಕೊನೆಯಲ್ಲಿ ಆ ಮಹಾವಾನರನು ಜಾನಕೀದೇವಿಯೊಬ್ಬಳನ್ನು ಬಿಟ್ಟು ಉಳಿದ ಲಂಕಾನಗರಕ್ಕೆ ಬೆಂಕಿಯನ್ನು ಹಚ್ಚಿ ಸುಟ್ಟುಹಾಕಿ ಶ್ರೀರಾಮನಿಗೆ ಪ್ರಿಯವಾರ್ತೆಯನ್ನು ತಿಳಿಸುವುದಕ್ಕಾಗಿ ಮತ್ತೆ ಸಮುದ್ರವನ್ನು ಲಂಘಿಸಿ ಹಿಂದಿರುಗಿ ಬಂದನು.

★

ಊಹೆಗೆ ನಿಲುಕದಷ್ಟು ಸಾಹಸಿಯಾದ ಆಂಜನೇಯನು ಮಹಾತ್ಮನಾದ ಶ್ರೀರಾಮನ ಬಳಿಗೆ ಹೋಗಿ ಪ್ರದಕ್ಷಿಣನಮಸ್ಕಾರ ಮಾಡಿ ‘‘ಶ್ರೀರಾಮ, ಸೀತಾದೇವಿಯನ್ನು ನೋಡಿ ಬಂದೆನು’’ ಎಂದು ಸತ್ಯವಾರ್ತೆಯನ್ನು ಹೇಳಿದನು.

★

ಅನಂತರ ಶ್ರೀರಾಮನು (ಲಕ್ಷ್ಮಣನೊಡನೆ) ಸುಗ್ರೀವ ಸಹಿತನಾಗಿ ದಕ್ಷಿಣ ಮಹಾಸಾಗರದ ತೀರವನ್ನು ಸೇರಿ, ಸೂರ್ಯಸಂಕಾಶಗಳಾದ ಘೋರಶರಗಳಿಂದ ಸಮುದ್ರಕ್ಕೆ ಅಪ್ಪಳಿಸಿ ಹೊಡೆದು, ಸಮುದ್ರವನ್ನು ಕ್ಷೋಭೆಗೊಳಿಸಿ ದಿಕ್ಕುಗೆಡಿಸಿದನು.

★

ಆಗ ನದೀಪತಿಯಾದ ಸಮುದ್ರರಾಜನು (ಭಯದಿಂದ) ಪ್ರತ್ಯಕ್ಷನಾಗಿ ತನ್ನ ಮೇಲೆ ಸೇತುವೆಯನ್ನು ಕಟ್ಟಬೇಕೆಂದು ತಿಳಿಸಿದನು. ಶ್ರೀರಾಮನು ಸಮುದ್ರರಾಜನ ವಚನದಂತೆ ನಳನೆಂಬ ವಾನರೋತ್ತಮನಿಂದ ಸೇತುವೆಯನ್ನು ಕಟ್ಟಿಸಿದನು.

★

ತೇನ ಗತ್ವಾ ಪುರೀಂ ಲಂಕಾಂ ಹತ್ವಾ ರಾವಣಮಾಹವೇ।
ರಾಮಃ ಸೀತಾಮನುಪ್ರಾಪ್ಯ ಪರಾಂ ವ್ರೀಡಾಮುಪಾಗಮತ್।। 81 ।।

★

ತಾಮುವಾಚ ತತೋ ರಾಮಃ ಪರುಷಂ ಜನಸಂಸದಿ।
ಅಮೃಷ್ಯಮಾಣಾ ಸಾ ಸೀತಾ ವಿವೇಶ ಜ್ವಲನಂ ಸತೀ।। 82 ।।

ತತೋಽಗ್ನಿವಚನಾತ್ ಸೀತಾಂ ಜ್ಞಾತ್ವಾ ವಿಗತಕಲ್ಮಷಾಮ್।
ಬಭೌ ರಾಮಃ ಸಂಪ್ರಹೃಷ್ಟಃ ಪೂಜಿತಃ ಸರ್ವದೈವತೈಃ।। 83।।

★

ಕರ್ಮಣಾ ತೇನ ಮಹತಾ ತ್ರೈಲೋಕ್ಯಂ ಸಚರಾಚರಮ್।
ಸದೇವರ್ಷಿಗಣಂ ತುಷ್ಟಂ ರಾಘವಸ್ಯ ಮಹಾತ್ಮನಃ।। 84 ।।

★

ಅಭಿಷಿಚ್ಯ ಚ ಲಂಕಾಯಾಂ ರಾಕ್ಷಸೇಂದ್ರಂ ವಿಭೀಷಣಮ್।
ಕೃತಕೃತ್ಯಸ್ತದಾ ರಾಮೋ ವಿಜ್ವರಃ ಪ್ರಮುಮೋದ ಹ ।। 85 ।।

★

ಆ ಸೇತುವೆಯ ಮೇಲೆ ಶ್ರೀರಾಮನು ವಾನರಸೇನೆಯೊಡನೆ ಲಂಕಾನಗರಕ್ಕೆ ಹೋಗಿ ಯುದ್ಧದಲ್ಲಿ ರಾವಣನನ್ನು ಸಂಹರಿಸಿದನು. ಆಮೇಲೆ ಶ್ರೀರಾಮನ ಆದೇಶದಂತೆ ಸೀತಾದೇವಿಯು ಅವನ ಬಳಿಗೆ ಬಂದಳು. ಅವಳನ್ನು ನೋಡಿ ಬಹಳ ನಾಚಿಕೆಯಾಯಿತು. (ರಾಕ್ಷಸರ ಬಳಿ ಬಹಳಕಾಲ ಇದ್ದವಳನ್ನು ಸ್ವೀಕರಿಸಿದರೆ ಅಯೋಧ್ಯೆಯ ಜನರು ಏನು ಆಡಿಕೊಳ್ಳುವರೋ ಎಂಬ ಸಂಕೋಚವೇ ನಾಚಿಕೆ ಅಥವಾ ತನ್ನನ್ನು ನಂಬಿ ಕಾಡಿಗೆ ಬಂದ ಮಡದಿಯನ್ನು ಸರಿಯಾಗಿ ರಕ್ಷಿಸಿಕೊಳ್ಳಲಾರದೆ ಇಷ್ಟು ಅನರ್ಥಕ್ಕೆ ಕಾರಣನಾದೆನೆಂದು ನಾಚಿಕೆ.)

★

ಆಗ ಶ್ರೀರಾಮನು ಜನಗಳೆದುರಿಗೆ ಸೀತಾದೇವಿಯನ್ನು ಉದ್ದೇಶಿಸಿ ಕಠೋರವಾದ ಮಾತುಗಳನ್ನು ಆಡಿದನು. ಅದನ್ನು ಸಹಿಸಲಾರದೆ ಪತಿವ್ರತೆಯಾದ ಸೀತೆಯು ಅಗ್ನಿಪ್ರವೇಶ ಮಾಡಿದಳು. ಅಗ್ನಿದೇವನು ಪ್ರತ್ಯಕ್ಷನಾಗಿ ಸೀತಾದೇವಿಯಲ್ಲಿ ಯಾವ ಲೋಪದೋಷಗಳೂ ಇಲ್ಲವೆಂದು ಹೇಳಿದನು. ಅದನ್ನು ಜನರೆದುರಿಗೆ ಅಗ್ನಿಯು ಹೇಳಿದ್ದರಿಂದ ಸೀತೆಯು ಪರಿಶುದ್ಧಳೆಂದು ತಿಳಿದು ರಾಘವನು ಅವಳನ್ನು ಸ್ವೀಕರಿಸಿದನು. ಶ್ರೀರಾಮನಿಗೆ ತುಂಬ ಸಂತೋಷವಾಯಿತು. ಸಮಸ್ತ ದೇವತೆಗಳೂ ಬಂದು ಆತನನ್ನು ಪೂಜಿಸಿ ಗೌರವಿಸಿದರು.

★

ಮಹಾತ್ಮನಾದ ರಾಘವನು ನಡೆಸಿದ ಅದ್ಭುತವಾದ ಆ ಎಲ್ಲ ಕಾರ್ಯಗಳನ್ನು ನೋಡಿ ಸ್ಥಾವರ ಜಂಗಮಾತ್ಮಕವಾದ ಲೋಕತ್ರಯವು ಆನಂದಿಸಿತು. ದೇವತೆಗಳೂ, ಋಷಿಗಳೂ ಸಂತುಷ್ಟರಾದರು.

★

ಅನಂತರ ರಾಘವನು ವಿಭೀಷಣನನ್ನು ಲಂಕೆಯಲ್ಲಿ ರಾಕ್ಷಸೇಂದ್ರನೆಂದು ಘೋಷಿಸಿ ಪಟ್ಟಾಭಿಷೇಕವನ್ನು ಮಾಡಿಸಿದನು. ಆಗ ಎಲ್ಲ ಆತಂಕಗಳೂ ಮುಗಿದವೆಂದೂ, ಕೃತಕೃತ್ಯನಾದೆನೆಂದೂ ಶ್ರೀರಾಮನಿಗೆ ಪರಮಾನಂದವಾಯಿತು.

★

ದೇವತಾಭ್ಯೋ ವರಂ ಪ್ರಾಪ್ಯ ಸಮುತ್ಥಾಪ್ಯ ಚ ವಾನರಾನ್।
ಅಯೋಧ್ಯಾಂ ಪ್ರಸ್ಥಿತೋ ರಾಮಃ ಪುಷ್ಪಕೇಣ ಸುಹೃದ್ವೃತಃ॥ 86 ॥

★

ಭರದ್ವಾಜಾಶ್ರಮಂ ಗತ್ವಾ ರಾಮಃ ಸತ್ಯಪರಾಕ್ರಮಃ।
ಭರತಸ್ಯಾಂತಿಕಂ ರಾಮೋ ಹನುಮಂತಂ ವ್ಯಸರ್ಜಯತ್॥ 87 ॥

★

ಪುನರಾಖ್ಯಾಯಿಕಾಂ ಜಲ್ಪನ್ ಸುಗ್ರೀವಸಹಿತಸ್ತದಾ।
ಪುಷ್ಪಕಂ ತತ್ ಸಮಾರುಹ್ಯ ನಂದಿಗ್ರಾಮಂ ಯಯೌ ತದಾ॥ 88 ॥

ನಂದಿಗ್ರಾಮೇ ಜಟಾಂ ಹಿತ್ವಾ ಭ್ರಾತೃಭಿಃ ಸಹಿತೋಽನಘಃ।
ರಾಮಃ ಸೀತಾಮನುಪ್ರಾಪ್ಯ ರಾಜ್ಯಂ ಪುನರವಾಪ್ತವಾನ್॥ 89 ॥

★

ಪ್ರಹೃಷ್ಟಮುದಿತೋ ಲೋಕಸ್ತುಷ್ಟಃ ಪುಷ್ಟಃ ಸುಧಾರ್ಮಿಕಃ।
ನಿರಾಮಯೋ ಹ್ಯರೋಗಶ್ಚ ದುರ್ಭಿಕ್ಷಭಯವರ್ಜಿತಃ॥ 90॥

★

ಯುದ್ಧದಲ್ಲಿ ಹತರಾಗಿದ್ದ ವಾನರರೆಲ್ಲರನ್ನೂ ದೇವತೆಗಳ ವರಬಲದಿಂದ ಬದುಕಿಸಿ, ಮಿತ್ರಸಮೂಹದಿಂದ ಪರಿವೃತನಾಗಿ ಪುಷ್ಪಕವಿಮಾನವನ್ನೇರಿ ಅಯೋಧ್ಯಾಭಿಮುಖವಾಗಿ ಪ್ರಯಾಣ ಮಾಡಿದನು.

★

ಸತ್ಯಸಂಧನಾದ ರಾಘವನು ದಾರಿಯಲ್ಲಿ ಭರದ್ವಾಜಾಶ್ರಮದಲ್ಲಿಳಿದು, ಭರತನಿಗೆ ತಾನು ಬಂದ ಸುದ್ದಿಯನ್ನು ತಿಳಿಸುವುದಕ್ಕಾಗಿ ಹನುಮಂತನನ್ನು ಕಳುಹಿಸಿದನು.

★

ಅನಂತರ ಸುಗ್ರೀವಾದಿ ಮಿತ್ರರೊಡನೆ ಮತ್ತೆ ಪುಷ್ಪಕವಿಮಾನವನ್ನೇರಿ ಪೂರ್ವಕಥೆಯೆಲ್ಲವನ್ನೂ ಹೇಳುತ್ತಾ ನಂದಿಗ್ರಾಮದ ಕಡೆಗೆ ತೆರಳಿದನು. ಪುಣ್ಯಾತ್ಮನಾದ ರಾಘವನು ನಂದಿಗ್ರಾಮದಲ್ಲಿಳಿದು, ಸೋದರರಾದ ಭರತಲಕ್ಷ್ಮಣಶತ್ರುಘ್ನರೊಡನೆ ಸೇರಿ ಸಂತೋಷಿಸಿದನು. ಎಲ್ಲರೂ ತಮ್ಮ ತಮ್ಮ ಜಟೆಯನ್ನು ತೆಗೆಯಿಸಿದರು. ಅನಂತರ ಶ್ರೀರಾಮನು ಸೀತಾದೇವಿಯೊಡನೆ ಪಟ್ಟಾಭಿಷಿಕ್ತನಾಗಿ ಕೋಸಲರಾಜ್ಯವನ್ನು ಪಡೆದುಕೊಂಡನು.

★

ಶ್ರೀರಾಮನು ರಾಜ್ಯಭಾರವನ್ನು ಮಾಡುತ್ತಿರಲು ರಾಜ್ಯದಲ್ಲಿದ್ದ ಪ್ರಜೆಗಳು ಧನಧಾನ್ಯಾದಿಗಳನ್ನು ಸಮೃದ್ಧವಾಗಿ ಪಡೆದು ಹರ್ಷದಿಂದ ನಲಿಯುತ್ತಾ ಸಂತೃಪ್ತರಾಗಿದ್ದರು. ಧನಲಾಭದಿಂದ ಪುಷ್ಟರಾಗಿ ಧರ್ಮಾಚರಣೆಯಲ್ಲಿ ತೊಡಗಿದ್ದರು. ಯಾವ ಮಾನಸಿಕ ಚಿಂತೆಯಾಗಲೀ, ರೋಗವಾಗಲೀ ಪ್ರಜೆಗಳನ್ನು ಕಾಡಲಿಲ್ಲ. ಬರಗಾಲದ ಹೆದರಿಕೆಯೇ ಅವರಿಗಿರಲಿಲ್ಲ.

★

ನ ಪುತ್ರಮರಣಂ ಕೇಚಿದ್ದ್ರಕ್ಷ್ಯಂತಿ ಪುರುಷಾಃ ಕ್ವಚಿತ್।
ನಾರ್ಯಶ್ಚಾವಿಧವಾ ನಿತ್ಯಂ ಭವಿಷ್ಯಂತಿ ಪತಿವ್ರತಾಃ॥ 91 ॥

ನ ಚಾಗ್ನಿಜಂ ಭಯಂ ಕಿಂಚಿನ್ನಾಪ್ಸು ಮಜ್ಜಂತಿ ಜಂತವಃ।
ನ ವಾತಜಂ ಭಯಂ ಕಿಂಚಿನ್ನಾಪಿ ಜ್ವರಕೃತಂ ತಥಾ॥ 92 ॥

★

ನ ಚಾಪಿ ಕ್ಷುದ್ಭಯಂ ತತ್ರ ನ ತಸ್ಕರಭಯಂ ತಥಾ।
ನಗರಾಣಿ ಚ ರಾಷ್ಟ್ರಾಣಿ ಧನಧಾನ್ಯಯುತಾನಿ ಚ॥ 93 ॥

★

ನಿತ್ಯಂ ಪ್ರಮುದಿತಾಃ ಸರ್ವೇ ಯಥಾ ಕೃತಯುಗೇ ತಥಾ।
ಅಶ್ವಮೇಧಶತೈರಿಷ್ಟ್ವಾ ತಥಾ ಬಹುಸುವರ್ಣಕೈಃ ॥ 94 ॥

★

ಗವಾಂ ಕೋಟ್ಯಯುತಂ ದತ್ವಾ ವಿದ್ವದ್ಭ್ಯೋ ವಿಧಿಪೂರ್ವಕಮ್।
ಅಸಂಖ್ಯೇಯಂ ಧನಂ ದತ್ವಾ ಬ್ರಾಹ್ಮಣೇಭ್ಯೋ ಮಹಾಯಶಾಃ॥ 95 ॥

★

ರಾಜವಂಶಾನ್ ಶತಗುಣಾನ್ ಸ್ಥಾಪಯಿಷ್ಯತಿ ರಾಘವಃ।
ಚಾತುರ್ವರ್ಣ್ಯಂ ಚ ಲೋಕೇಽಸ್ಮಿನ್ ಸ್ವೇ ಸ್ವೇ ಧರ್ಮೇ ನಿಯೋಕ್ಷ್ಯತಿ॥ 96 ॥

★

ರಾಮರಾಜ್ಯದಲ್ಲಿದ್ದ ಪ್ರಜೆಗಳೆಲ್ಲರೂ ತಮ್ಮೆದುರಿಗೆ ಮಕ್ಕಳು ಸಾಯುವುದನ್ನು ಕಾಣಲಿಲ್ಲ. ಮಹಿಳೆಯರು ವಿಧವೆಯರಾಗಲಿಲ್ಲ. ಅವರೆಲ್ಲರೂ ಪತಿವ್ರತೆಯರಾಗಿದ್ದರು. ರಾಮರಾಜ್ಯದಲ್ಲಿ ಅಗ್ನಿಭಯವಿರಲಿಲ್ಲ. ನೀರಲ್ಲಿ ಮುಳುಗಿ ಜನರು ಸಾಯುತ್ತಿರಲಿಲ್ಲ. ಬಿರುಗಾಳಿಯ ಭಯವಾಗಲೀ, ಜ್ವರಬಾಧೆಯಾಗಲಿ ಇರಲಿಲ್ಲ.

★

ಇನ್ನು ಹಸಿವಿನ ಬಾಧೆಯೂ ಇಲ್ಲ. ಕಳ್ಳಕಾಕರ ಹೆದರಿಕೆಯೂ ಇಲ್ಲ. ನಗರಗಳೂ, ಗ್ರಾಮಾಂತರ ಪ್ರದೇಶಗಳೂ ಧನಧಾನ್ಯಗಳಿಂದ ತುಂಬಿದ್ದವು.

★

ಕೃತಯುಗದಲ್ಲಿ ಇದ್ದಂತೆ ಜನರು ಸಂತುಷ್ಟರಾಗಿದ್ದರು. ಶ್ರೀರಾಮನು ವಿಪುಲವಾಗಿ ಸುವರ್ಣನಾಣ್ಯಗಳ ವಿನಿಯೋಗದಿಂದ ನೂರಾರು ಅಶ್ವಮೇಧ ಯಾಗಗಳನ್ನು ಮಾಡಿದನು.

★

ವಿದ್ವಾಂಸರಾದ ಬ್ರಾಹ್ಮಣರಿಗೆ ವಿಧಿಪೂರ್ವಕವಾಗಿ ಕೋಟಿಗಟ್ಟಲೆ ಹಸುಗಳನ್ನು ದಾನಮಾಡಿದನಲ್ಲದೆ ಅಸಂಖ್ಯವಾಗಿ ಧನವನ್ನು ದಾನ ಮಾಡಿದನು.

★

ವಾಲ್ಮೀಕಿ ಮುನಿಗಳೇ, ಕೀರ್ತಿಶಾಲಿಯಾದ ರಾಘವನು ಕ್ಷತ್ರಿಯವಂಶದ ನೂರಾರು ಸಾಮಂತರನ್ನು (ರಾಜ್ಯಪಾಲನೆಗಾಗಿ) ಅಲ್ಲಲ್ಲಿ ಸ್ಥಾಪಿಸುವನು. ಅಲ್ಲದೆ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಈ ನಾಲ್ಕು ವರ್ಣದವರೂ ತಮ್ಮ ತಮ್ಮ ಧರ್ಮವನ್ನು ತಪ್ಪದೇ ಪಾಲಿಸುತ್ತಿರಬೇಕೆಂದು ನಿಯಮಿಸುವನು.

★

ದಶವರ್ಷ ಸಹಸ್ರಾಣಿ ದಶವರ್ಷ ಶತಾನಿ ಚ।
ರಾಮೋ ರಾಜ್ಯಮುಪಾಸಿತ್ವಾ ಬ್ರಹ್ಮಲೋಕಂ ಪ್ರಯಾಸ್ಯತಿ॥ 97 ॥

★

ಇದಂ ಪವಿತ್ರಂ ಪಾಪಘ್ನಂ ಪುಣ್ಯಂ ವೇದೈಶ್ಚ ಸಂಮಿತಮ್।
ಯಃ ಪಠೇದ್ರಾಮಚರಿತಂ ಸರ್ವಪಾಪೈಃ ಪ್ರಮುಚ್ಯತೇ॥ 98॥

ಏತದಾಖ್ಯಾನಮಾಯುಷ್ಯಂ ಪಠನ್ ರಾಮಾಯಣಂ ನರಃ।
ಸಪುತ್ರಪೌತ್ರಃ ಸಗಣಃ ಪ್ರೇತ್ಯ ಸ್ವರ್ಗೇ ಮಹೀಯತೇ॥ 99 ॥

★

ಪಠನ್ ದ್ವಿಜೋ ವಾಗೃಷಭತ್ವಮೀಯಾತ್
ಸ್ಯಾತ್ ಕ್ಷತ್ರಿಯೋ ಭೂಮಿಪತಿತ್ವಮೀಯಾತ್।
ವಣಿಗ್ಜನಃ ಪುಣ್ಯಫಲತ್ವಮೀಯಾ-
ಜ್ಜನಶ್ಚ ಶೂದ್ರೋಽಪಿ ಮಹತ್ತ್ವಮೀಯಾತ್॥ 100॥

★

ಇತ್ಯಾರ್ಷೇ ಶ್ರೀಮದ್ರಾಮಾಯಣೇ ವಾಲ್ಮೀಕೀಯೇ ಆದಿಕಾವ್ಯೇ ಬಾಲಕಾಂಡೇ
ಪ್ರಥಮಃ ಸರ್ಗಃ

ಸಂಕ್ಷೇಪ ರಾಮಾಯಣ

ಶ್ರೀರಾಮನು ಹನ್ನೊಂದು ಸಾವಿರ ವರ್ಷಗಳ ಕಾಲ ಧರ್ಮದಿಂದ ರಾಜ್ಯಭಾರವನ್ನು ಮಾಡಿ ಬ್ರಹ್ಮಲೋಕಕ್ಕೆ (ಸ್ವಸ್ಥಾನವಾದ ವೈಕುಂಠ) ಹೋಗುವನು.

★

ಇದು ಪವಿತ್ರವೂ, ಪಾಪಹಾರಿಯೂ ಆದ ಶ್ರೀರಾಮನ ಪುಣ್ಯಚರಿತೆ. ಆದ್ದರಿಂದ ಇದು ವೇದಸದೃಶವಾದುದು. ಇದನ್ನು ಪಠಿಸತಕ್ಕವನು ಸಮಸ್ತ ಪಾಪಗಳಿಂದಲೂ ವಿಮುಕ್ತನಾಗುತ್ತಾನೆ. ದೀರ್ಘಾಯುಸ್ಸನ್ನು ನೀಡುವ ರಾಮಾಯಣವೆಂಬ ಈ ಚರಿತೆಯನ್ನು ಪಾರಾಯಣ ಮಾಡುವ ಮನುಷ್ಯನು ಪುತ್ರಪೌತ್ರಾದಿಗಳಿಂದಲೂ, ಸೇವಕವರ್ಗದಿಂದಲೂ ಕೂಡಿ ಸುಖವಾಗಿದ್ದು, ಮರಣಾನಂತರ ಸ್ವರ್ಗಲೋಕದಲ್ಲಿಯೂ ದೇವತೆಗಳಿಂದ ಸತ್ಕೃತನಾಗಿ ಸುಖವಾಗಿರುವನು.

★

ಶ್ರೀಮದ್ರಾಮಾಯಣವನ್ನು ಪಠಿಸುವ ವಿಪ್ರನು ವಾಕ್ಪಟುತ್ವವನ್ನು ಪಡೆದು ವಾಗ್ವಿಶಾರದನಾಗುವನು. ಕ್ಷತ್ರಿಯನು ರಾಜ್ಯವನ್ನು ಪಡೆದು ಭೂಮಿಪಾಲನಾಗುವನು. ವೈಶ್ಯನು ವಾಣಿಜ್ಯದ ಫಲವಾದ ಧನವನ್ನು ಗಳಿಸುವನು. ಶೂದ್ರನು ಸತ್ಯ, ಸದಾಚಾರಾದಿಗುಣಗಳನ್ನು ಪಡೆದು ಎಲ್ಲರ ಗೌರವಕ್ಕೆ ಪಾತ್ರನಾಗುವನು.

★

ಈ ಪ್ರಕಾರವಾಗಿ ನಾರದರು ವಾಲ್ಮೀಕಿಮುನಿಗಳಿಗೆ ಶ್ರೀರಾಮಚರಿತೆಯನ್ನು ಹೇಳಿದರು.

★★★

ಅಂತ್ಯ ಮಂಗಲ

ಸ್ವಸ್ತಿ ಪ್ರಜಾಭ್ಯಃ ಪರಿಪಾಲಯಂತಾಂ
ನ್ಯಾಯ್ಯೇನ ಮಾರ್ಗೇಣ ಮಹೀಂ ಮಹೀಶಾಃ।
ಗೋಬ್ರಾಹ್ಮಣೇಭ್ಯಃ ಶುಭಮಸ್ತು ನಿತ್ಯಂ
ಲೋಕಾಸ್ಸಮಸ್ತಾಸ್ಸುಖಿನೋ ಭವಂತು॥

★

ಯನ್ಮಂಗಲಂ ಸಹಸ್ರಾಕ್ಷೇ ಸರ್ವದೇವನಮಸ್ಕೃತೇ।
ವೃತ್ರನಾಶೇ ಸಮಭವತ್ತತ್ತೇ ಭವತು ಮಂಗಲಮ್॥

★

ಯನ್ಮಂಗಲಂ ಸುಪರ್ಣಸ್ಯ ವಿನತಾಽಕಲ್ಪಯತ್ಪುರಾ।
ಅಮೃತಂ ಪ್ರಾರ್ಥಯಾನಸ್ಯ ತತ್ತೇ ಭವತು ಮಂಗಲಮ್॥

★

ಅಮೃತೋತ್ಪಾದನೇ ದೈತ್ಯಾನ್ಘ್ನತೋ ವ್ರಜಧರಸ್ಯ ಯತ್।
ಅದಿತಿರ್ಮಂಗಲಂ ಪ್ರಾದಾತ್ತತ್ತೇ ಭವತು ಮಂಗಲಮ್॥

★

ಸಂಕ್ಷೇಪ ರಾಮಾಯಣ

ಪ್ರಜೆಗಳಿಗೆಲ್ಲ ಮಂಗಳವಾಗಲಿ. ರಾಜರು ಭೂಮಂಡಲವನ್ನು ನ್ಯಾಯದಿಂದ ಕೂಡಿದ ರೀತಿಯಲ್ಲಿ ಆಳ್ವಿಕೆಯನ್ನು ನಡೆಸಲಿ. ಯಾವಾಗಲೂ ಗೋಬ್ರಾಹ್ಮಣರಿಗೆಲ್ಲ ಶುಭವಾಗಲಿ. ಸಮಸ್ತ ಪ್ರಜೆಗಳೂ ಸುಖಿಗಳಾಗಲಿ.

★

ಶ್ರೀರಾಮ

ಸರ್ವದೇವತೆಗಳಿಂದ ವಂದಿಸಲ್ಪಡುವ ಇಂದ್ರನಿಗೆ ವೃತ್ರಾಸುರನಾಶದ ಕಾಲದಲ್ಲಿ ಯಾವ ರೀತಿಯ ಮಂಗಲ ಉಂಟಾಯಿತೋ ಆ ರೀತಿಯಾದ ಮಂಗಲವು ನಿನಗೂ ಆಗಲಿ.

★

ಶ್ರೀರಾಮ

ದೇವಲೋಕದಿಂದ ಅಮೃತವನ್ನು ತರಲಿಕ್ಕಾಗಿ ಗರುಡನಿಗೆ ವಿನತೆಯು ಯಾವ ಮಂಗಲವನ್ನು ಕೋರಿದಳೋ ಆ ಮಂಗಲವು ನಿನಗೂ ಉಂಟಾಗಲಿ.

★

ಶ್ರೀರಾಮ

ಅಮೃತವನ್ನು ಪಡೆಯಲಿಕ್ಕಾಗಿ ದೈತ್ಯರನ್ನು ನಾಶಮಾಡಲು ಇಂದ್ರನಿಗೆ ಅದಿತಿಯು ಯಾವ ಮಂಗಲವನ್ನು ಉಂಟುಮಾಡಿದಳೋ ಅದು ನಿನಗೂ ಉಂಟಾಗಲಿ.

★

ಸಂಕ್ಷೇಪ ರಾಮಾಯಣ

ತ್ರೀನ್ವಿಕ್ರಮಾನ್ಪ್ರಕ್ರಮತೋ ವಿಷ್ಣೋರಮಿತತೇಜಸಃ।
ಯದಾಸೀನ್ಮಂಗಲಂ ರಾಮ ತತ್ತೇ ಭವತು ಮಂಗಲಮ್॥

★

ಋತವಃ ಸಾಗರಾಃ ದ್ವೀಪಾ ವೇದಾ ಲೋಕಾ ದಿಶಶ್ಚ ತೇ।
ಮಂಗಲಾನಿ ಮಹಾಬಾಹೋ ದಿಶಂತು ತವ ಸರ್ವದಾ॥

★

ಮಂಗಲಂ ಕೋಸಲೇಂದ್ರಾಯ ಮಹನೀಯಗುಣಾತ್ಮನೇ ।
ಚಕ್ರವರ್ತಿತನೂಜಾಯ ಸಾರ್ವಭೌಮಾಯ ಮಂಗಲಮ್॥

★

ಯದಕ್ಷರಪದಭ್ರಷ್ಟಂ ಮಾತ್ರಾಹೀನಂ ತು ಯದ್ಭವೇತ್।
ತತ್ಸರ್ವಂ ಕ್ಷಮ್ಯತಾಂ ದೇವ ನಾರಾಯಣ ನಮೋಽಸ್ತುತೇ॥

★

ಶ್ರೀರಾಮ

ಮಹಾತೇಜಸ್ವಿಯಾದ ವಿಷ್ಣುವಿನ ಮೂರು ಹೆಜ್ಜೆಗಳನ್ನು ದಾಟಲು ಯಾವ ಮಂಗಲವು ಉಂಟಾಯಿತೋ ಅದು ನಿನಗೂ ಉಂಟಾಗಲಿ.

★

ಶ್ರೀರಾಮ

ವಸಂತಾದಿ ಆರು ಋತುಗಳೂ, ಸಪ್ತಸಾಗರಗಳೂ, ಸಪ್ತದ್ವೀಪಗಳೂ, ನಾಲ್ಕು ವೇದಗಳೂ, ಹದಿನಾಲ್ಕು ಲೋಕಗಳೂ, ದಶ ದಿಕ್ಕುಗಳೂ ನಿನಗೆ ಯಾವಾಗಲೂ ಮಂಗಲವನ್ನು ಉಂಟುಮಾಡಲಿ.

★

ಕೋಸಲ ದೇಶದ ರಾಜನಾದ, ಶ್ರೇಷ್ಠವಾದ ಗುಣವಂತನಾದ, ಸಾರ್ವಭೌಮನಾದ, ಚಕ್ರವರ್ತಿಯ ಮಗನಾದ ಶ್ರೀರಾಮಚಂದ್ರನಿಗೆ ಮಂಗಲವುಂಟಾಗಲಿ.

★

ಅಕ್ಷರಗಳಿಂದ, ಪದಗಳಿಂದ, ಮಾತ್ರಾಕಾಲಗಳಿಂದ ಲೋಪವಾಗಿದೆಯೋ ಅವೆಲ್ಲವನ್ನೂ ಕ್ಷಮಿಸು. ಹೇ ನಾರಾಯಣನೇ, ನಿನಗೆ ನಮಸ್ಕಾರ.

★

ಭಜನ ರಾಮಾಯಣ

ಬಾಲಕಾಂಡ

ಶುದ್ಧಬ್ರಹ್ಮಪರಾತ್ಪರ ರಾಮ। ಕಾಲಾತ್ಮಕಪರಮೇಶ್ವರ ರಾಮ ।

ಬ್ರಹ್ಮಾದ್ಯಮರಪ್ರಾರ್ಥಿತ ರಾಮ । ಶೇಷತಲ್ಪಸುಖನಿದ್ರಿತ ರಾಮ।

ಚಂಡಕಿರಣಕುಲಮಂಡನ ರಾಮ। ಶ್ರೀಮದ್ದಶರಥನಂದನ ರಾಮ।

ಕೌಸಲ್ಯಾಸುಖವರ್ಧನ ರಾಮ। ವಿಶ್ವಾಮಿತ್ರಪ್ರಿಯಧನ ರಾಮ ।

ಘೋರತಾಟಕಾಘಾತಕ ರಾಮ । ಮಾರೀಚಾದಿನಿಪಾತಕ ರಾಮ ।

ಕೌಶಿಕಮಖಸಂರಕ್ಷಕ ರಾಮ । ಶ್ರೀಮದಹಲ್ಯೋದ್ಧಾರಕ ರಾಮ ।

ಗೌತಮಮುನಿಸಂಪೂಜಿತ ರಾಮ । ಸುರಮುನಿವರಗಣಸಂಸ್ತುತ ರಾಮ ।

ನಾವಿಕಧಾವಿತಮೃದುಪದ ರಾಮ । ಮಿಥಿಲಾಪುರಜನಮೋದದ ರಾಮ ।

ವಿದೇಹಮಾನಸರಂಜಕ ರಾಮ । ತ್ರ್ಯಂಬಕಕಾರ್ಮುಕಭಂಜಕ ರಾಮ ।

ಸೀತಾರ್ಪಿತವರಮಾಲಿಕ ರಾಮ । ಕೃತವೈವಾಹಿಕಕೌತುಕ ರಾಮ

ಭಾರ್ಗವದರ್ಪವಿನಾಶಕ ರಾಮ। ಶ್ರೀಮದಯೋಧ್ಯಾನಂದಕ ರಾಮ ॥

ರಾಮ ರಾಮ ಜಯ ರಾಜಾರಾಮ   ರಾಮ ರಾಮ ಜಯ ಸೀತಾರಾಮ

ಅಯೋಧ್ಯಾ ಕಾಂಡ

ಅಗಣಿತಗುಣಗಣಭೂಷಿತ ರಾಮ । ಅವನೀಕಾಮಿನಿಕಾಮಿತ ರಾಮ ।

ರಾಕಾಚಂದ್ರಸಮಾನನ ರಾಮ । ಪಿತೃವಾಕ್ಯಾಶ್ರಿತಕಾನನ ರಾಮ ।

ಪ್ರಿಯಗುಹವಿನಿವೇದಿತಪದ ರಾಮ । ತತ್ಕ್ಷಾಳಿತನಿಜಮೃದುಪದ ರಾಮ ।

ಭರದ್ವಾಜದೃಗಾನಂದನ ರಾಮ । ಚಿತ್ರಕೂಟಾದ್ರಿನಿಕೇತನ ರಾಮ ।

ದಶರಥಸಂತತಚಿಂತಿತ ರಾಮ । ಕೈಕೇಯೀಸುತಪ್ರಾರ್ಥಿತ ರಾಮ ।

ವಿರಚಿತನಿಜಪಿತೃಕರ್ಮಕ ರಾಮ । ಭರತಾರ್ಪಿತನಿಜಪಾದುಕ ರಾಮ ।

ದಂಡಕಾವನಜನಪಾವನ ರಾಮ ।

ರಾಮ ರಾಮ ಜಯ ರಾಜಾರಾಮ   ರಾಮ ರಾಮ ಜಯ ಸೀತಾರಾಮ

ಅರಣ್ಯ ಕಾಂಡ

ದುಷ್ಟವಿರಾಧವಿನಾಶಕ ರಾಮ । ಶರಭಂಗಸುತೀಕ್ಷ್ಣಾರ್ಚಿತ ರಾಮ ।

ಅಗಸ್ತ್ಯಾನುಗ್ರಹವರ್ತಿತ ರಾಮ। ಗೃಧ್ರಾಧಿಪಸಂಸೇವಿತ ರಾಮ ।

ಪಂಚವಟೀತಟಸುಸ್ಥಿತ ರಾಮ । ಶೂರ್ಪಣಖಾರ್ತಿವಿಧಾಯಕ ರಾಮ ।

ಖರದೂಷಣಮುಖಭಂಜಕ ರಾಮ । ಸೀತಾಪ್ರಿಯಹರಿಣಾನುಗ ರಾಮ।

ಮಾರೀಚಾದಿನಿಪಾತಕ ರಾಮ । ವಿನಷ್ಟಸೀತಾನ್ವೇಷಕ ರಾಮ ।

ಗೃಧ್ರಾದಿಪಗತಿದಾಯಕ ರಾಮ । ಶಬರೀದತ್ತಫಲಾಶನ ರಾಮ ।

ಕಬಂಧಬಾಹುಚ್ಛೇದಕ ರಾಮ ।

ರಾಮ ರಾಮ ಜಯ ರಾಜಾರಾಮ । ರಾಮ ರಾಮ ಜಯ ಸೀತಾರಾಮ ।

ಕಿಷ್ಕಿಂಧಾ ಕಾಂಡ

ಹನುಮತ್ಸೇವಿತನಿಜಪದ ರಾಮ । ನತಸುಗ್ರೀವಾಭೀಷ್ಟದ ರಾಮ ।

ಗರ್ವಿತವಾಲಿಸಂಹಾರಕ ರಾಮ । ವಾನರದೂತಪ್ರೇಷಕ ರಾಮ ।

ಹಿತಕರಲಕ್ಷ್ಮಣಸಂಯುತ ರಾಮ ।

ರಾಮ ರಾಮ ಜಯ ರಾಜಾರಾಮ । ರಾಮ ರಾಮ ಜಯ ಸೀತಾರಾಮ ।

ಸುಂದರ ಕಾಂಡ

ಕಪಿವರಸಂತತಸಂಸ್ಮೃತ ರಾಮ । ತದ್ಗತಿವಿಘ್ನಧ್ವಂಸಕ ರಾಮ ।

ಸೀತಾಪ್ರಾಣಾಧಾರಕ ರಾಮ । ದುಷ್ಟದಶಾನನದೂಷಿತ ರಾಮ ।

ಶಿಷ್ಟಹನೂಮದ್ಭೂಷಿತ ರಾಮ । ಸೀತೋದಿತಕಾಕಾವನ ರಾಮ ।

ಕೃತಚೂಡಾಮಣಿದರ್ಶನ ರಾಮ । ಕಪಿವರವಚನಾಶ್ವಾಸಿತ ರಾಮ ।

ರಾಮ ರಾಮ ಜಯ ರಾಜಾರಾಮ । ರಾಮ ರಾಮ ಜಯ ಸೀತಾರಾಮ ।

ಯುದ್ಧ ಕಾಂಡ

ರಾವಣನಿಧನಪ್ರಸ್ಥಿತ ರಾಮ । ವಾನರಸೈನ್ಯಸಮಾವೃತ ರಾಮ ।
ಶೋಷಿತಶರಧೀಶಾರ್ಚಿತ ರಾಮ । ವಿಭೀಷಣಾಭಯದಾಯಕ ರಾಮ ।
ಪರ್ವತಸೇತುನಿಬಂಧಕ ರಾಮ । ಕುಂಭಕರ್ಣಶಿರಚ್ಛೇದಕ ರಾಮ ।
ರಾಕ್ಷಸಕೋಟಿವಿಮರ್ದಕ ರಾಮ । ಅಹಿಮಹಿರಾವಣಮಾರಣ ರಾಮ ।
ಸಂಹೃತದಶಮುಖರಾವಣ ರಾಮ । ವಿಧಿಭವಮುಖಸುರಸಂಸ್ತುತ ರಾಮ ।
ಖಸ್ಥಿತದಶರಥವೀಕ್ಷಿತ ರಾಮ । ಸೀತಾದರ್ಶನಮೋದಿತ ರಾಮ ।
ಅಭಿಷಿಕ್ತವಿಭೀಷಣನುತ ರಾಮ । ಪುಷ್ಪಕಯಾನಾರೋಹಣ ರಾಮ ।
ಭರದ್ವಾಜಾದಿನಿಷೇವಿತ ರಾಮ । ಭರತಪ್ರಾಣವಿತರಣ ರಾಮ ।
ಸಾಕೇತಪುರೀಭೂಷಣ ರಾಮ । ಸಕಲಸ್ವೀಯಸಮಾವೃತ ರಾಮ ।
ರತ್ನಲಸತ್ಪೀಠಸ್ಥಿತ ರಾಮ । ಪಟ್ಟಾಭಿಷೇಕಾಲಂಕೃತ ರಾಮ ।
ಪಾರ್ಥಿವಕುಲಸನ್ಮಾನಿತ ರಾಮ । ವಿಭೀಷಣಾರ್ಪಿತರಂಗಕ ರಾಮ ।
ಕೀಶಕುಲಾನುಗ್ರಹಕ ರಾಮ । ಸಕಲಜೀವಸಂರಕ್ಷಕ ರಾಮ।
ಸಮಸ್ತಲೋಕೋದ್ಧಾರಕ ರಾಮ ।
ರಾಮ ರಾಮ ಜಯ ರಾಜಾರಾಮ । ರಾಮ ರಾಮ ಜಯ ಸೀತಾರಾಮ ।

ಉತ್ತರ ಕಾಂಡ

ರಜಕಕಟೂಕ್ತ್ಯುದ್ದೀಪಿತ ರಾಮ । ವಿಪಿನಪ್ರೇಷಿತಸೀತಾ ರಾಮ ।
ಕಾಂತಾವಿರಹಸುದುಃಖಿತ ರಾಮ । ಸೋದರಸಂವರ್ಧಿತಮತಿ ರಾಮ ।
ಶಂಭೂಕಾಖ್ಯವಿಮರ್ದಕ ರಾಮ । ಸಾಹಸಶೋಷಿತಭೂಸುರ ರಾಮ ।
ಅಶ್ವಮೇಧಕೃತದೀಕ್ಷಾ ರಾಮ । ಅನುಪಮಬಲಬಹುದುರ್ಜಯ ರಾಮ ।
ಲವಕುಶಜನನಾನಂದಿತ ರಾಮ । ತನುಭವಸುವಿನುತನಿಜಕಥ ರಾಮ।
ಸರಸಿಜಭವಮುಖಬೋಧಿತ ರಾಮ । ಸಕಲಸುರಸ್ತುತದಶರಥ ರಾಮ ।
ಭಜಕಾಭೀಷ್ಟದಸುರಕುಜ ರಾಮ । ಭುವನತ್ರಯಸಂಪೂಜಿತ ರಾಮ ।
ಅಕಳಂಕಿತಜನಪೋಷಕ ರಾಮ । ವಿನಯವಿಶೇಷಸುಶೋಭಿತ ರಾಮ
ನೀಲಮೇಘನಿಭವಿಗ್ರಹ ರಾಮ । ನಿರ್ವಿಕಾರಸದನುಗ್ರಹ ರಾಮ ।
ಜಯ ಜಯ ರಘುಕುಲಮೌಕ್ತಿಕ ರಾಮ । ಜಯ ಜಯ ರಮ್ಯಗುಣಾನ್ವಿತ ರಾಮ ॥
ರಾಮ ರಾಮ ಜಯ ರಾಜಾರಾಮ ರಾಮ ರಾಮ ಜಯ ಸೀತಾರಾಮ

'ರಾಮಾಯಣ' ಎಂದರೆ ರಾಮನ ಮಾರ್ಗ; ಅದು ಧರ್ಮದ ಮಾರ್ಗ; ವೈಕುಂಠದಿಂದ ಭುವಿಗಿಳಿದ ಮಾರ್ಗ; ಭುವಿಯಲ್ಲಿ ಬಾಳಿ ಬದುಕಿದ ಮಾರ್ಗ; ಭುವಿಯಿಂದ ಪುನಃ ದಿವಿಗೇರಿದ ಮಾರ್ಗ. ಆ ಮಾರ್ಗದೊಟ್ಟಿಗೆ ನಮ್ಮ ಮನಸ್ಸು ಸಾಗಬೇಕು. ಎತ್ತ ಎತ್ತ ರಾಮ ಸಾಗಿದ ಅತ್ತ ಅತ್ತ ನಮ್ಮ ಮನಸ್ಸು ಸಾಗಬೇಕು, ಅದು ಹೋಗಿ ನೆಲೆ ನಿಲ್ಲುವುದು ರಾಮ ನೆಲೆ ನಿಂತಲ್ಲಿ, ಅವನ ಆನಂದದ ನೆಲೆಯಲ್ಲಿ. ರಾಮಾಯಣ ಪಾರಾಯಣ-ಅನುಸಂಧಾನಗಳ ಫಲ ಅದು.

'ರಾಮಾಯಣ' ವೇದಗಳ ಸಾರ. ರಾಮಾಯಣದ ಸಾರ 'ಸಂಕ್ಷೇಪ ರಾಮಾಯಣ'. ಈ ಸಂಕ್ಷೇಪ ರಾಮಾಯಣವು ಎಲ್ಲರ ನಾಲಗೆಯಲ್ಲಿ ನಲಿದಾಡಬೇಕು; ಕಂಠಗತವಾಗಬೇಕು; ಹೃದ್ಗತವಾಗಬೇಕು; ಆತ್ಮಗತವಾಗಬೇಕು.

'ಖೇಲತಿ ಮಮ ಹೃದಯೇ ರಾಮಃ' ಎಂದು ಸಂತರು ಸಾರಿದ ಹಾಗೆ ಶ್ರೀರಾಮ ನಮ್ಮೆಲ್ಲರ ಹೃದಯದಂಗಳದಲ್ಲಿ ನಲಿದಾಡಬೇಕು, ಆ ಆಟ ನಮ್ಮೆಲ್ಲರ ಬಾಳಾಟದ ಗೋಳಾಟವನ್ನು ದೂರ ಮಾಡಿ ಪರಮಾನಂದದ ನೆಲೆಯಲ್ಲಿ ನೆಲೆ ನಿಲ್ಲಿಸಬೇಕು. ಇದು ಶ್ರೀರಾಮಚಂದ್ರಾಪುರಮಠದ ಸಂಕಲ್ಪ.

-ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು

ಪ್ರಕಾಶಕರು
ಶ್ರೀ ಭಾರತೀಪ್ರಕಾಶನ
ಶ್ರೀರಾಮಚಂದ್ರಾಪುರ ಮಠ
ಅಂಚೆ ಹನಿಯ, ತಾ ಹೊಸನಗರ, ಶಿವಮೊಗ್ಗ ಜಿಲ್ಲೆ 577418
ದೂರವಾಣಿ 08185 256183 / 256050 / 9448495696